# ಹಂಪಿ ಟೈಮ್ಸ್

HAMPI TIMES


ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 Volume:03 • ಸಂಚಿಕೆ: 24 Issue: 24 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 18.07.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2











## ಆನಂದ ಬಾಣ





ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


## ಮೈಕ್ರೋ ನ್ಯೂಸ್

### ಜು.19 ರಂದು ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪವಿಭಾಗ ಕಚೇರಿಯಲ್ಲಿ ಜು.19 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ.

ಹೊಸಪೇಟೆ ತಾಲೂಕಿನ ಗ್ರಾಮೀಣ ಭಾಗದ ವಿದ್ಯುತ್ ಗ್ರಾಹಕರು(ನಗರ ಹೊರತುಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆಗಳು ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಸಲ್ಲಿಸಿ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಬಹುದು ಎಂದು ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ದಯಾನಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.19 ರಂದು ಗ್ರಾಮೀಣದಲ್ಲಿ ಭಾಗ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ:**

ಬಳ್ಳಾರಿ ಗ್ರಾಮೀಣ ಉಪ-ವಿಭಾಗ ಜೆಸ್ಕಾಂ ವ್ಯಾಪ್ತಿಯ 110ಕೆ.ವಿ ಅಲ್ಲಿಪುರ-ಬಳ್ಳಾರಿ ಉತ್ತರ ಮಾರ್ಗದ ಎಲ್‌ಐಎಲ್‌ಓ ನಿರ್ಮಾಣ ಕಾರ್ಯವನ್ನು ತುರ್ತಾಗಿ ಕೈಗೊಳ್ಳುತ್ತಿರುವುದರಿಂದ 110/11ಕೆ.ವಿ ಯ ಸೋಮಸಮುದ್ರ ವಿದ್ಯುತ್ ಉಪ-ಕೇಂದ್ರ ಮತ್ತು 33/11ಕೆ.ವಿ ಗುಡದೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಲ್ಲಾ 11ಕೆ.ವಿ ಮಾರ್ಗಗಳಲ್ಲಿ ಜು.19 ರಂದು ಬೆಳಗ್ಗೆ 07 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*
110/11ಕೆ.ವಿ ಶ್ರೀಧರಗಡ್ಡೆ ಉಪ-ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಲ್ಲಾ 11ಕೆ.ವಿ ಫೀಡರ್‌ಗಳು ಮತ್ತು 33/11ಕೆ.ವಿ ಗುಡದೂರು ಉಪ-ಕೇಂದ್ರದಿಂದ ವಿದ್ಯುತ್ ಸರಬರಾಜು ಎಲ್ಲಾ 11ಕೆ.ವಿ. ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕೆಂದು ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೋಹನಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್.ಎಂ.ಸೌಜನ್ಯಳ ಒಂದು ಲೋಟ ನೀರಿನ ಕಥೆ


# ರಾಜ್ಯ ಮಟ್ಟದ ಮಕ್ಕಳ ಕಥಾ ಸ್ಪರ್ಧೆಗೆ ಆಯ್ಕೆ

### ಪಾಲಕರು, ಶಿಕ್ಷಕರಲ್ಲಿ ಹರ್ಷ | 25 ಲೇಖಕರಲ್ಲಿ ಅತೀ ಕಿರಿಯ ವಯಸ್ಸಿನ ಕಥೆಗಾರ್ತಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಬಸರಕೋಡು ಗ್ರಾಮದ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಎಸ್.ಎಂ.ಸೌಜನ್ಯ ಬರೆದ ಕಥೆಯು ಅವ್ವ ಪುಸ್ತಕಾಲಯ ಆಯೋಜಿಸಿದ್ದ ರಾಜ್ಯ ಮಟ್ಟದ ಮಕ್ಕಳ ಕಥಾ ಸ್ಪರ್ಧೆಗೆ ಆಯ್ಕೆಯಾಗಿದೆ.

ಕಥಾ ಸ್ಪರ್ಧೆಗೆ ಒಟ್ಟು 120 ಕಥೆಗಳು ಬಂದಿದ್ದು ಅದರಲ್ಲಿ 25 ಕಥೆಗಳನ್ನು ಆಯ್ಕೆ ಮಾಡಲಾಗಿದೆ. ಸೌಜನ್ಯಳು ಉಳಿದ ಎಲ್ಲಾ ಕಥೆಗಾರರಲ್ಲಿ ಅತ್ಯಂತ ಕಿರಿಯ ವಯಸ್ಸಿನ ಕಥೆಗಾರ್ತಿಯಾಗಿರುವುದು ಹೆಮ್ಮೆಯ ಸಂಗತಿ. 25 ಕಥೆಗಳಲ್ಲಿ ಎರಡು ಕಥೆಗಳು ಪ್ರಥಮ ಬಹುಮಾನಕ್ಕೆ ಹಾಗೂ ಆರು ಕಥೆಗಳು ಮೆಚ್ಚುಗೆ ಪಡೆದ ವಿಭಾಗಕ್ಕೆ ಆಯ್ಕೆಯಾಗಿವೆ. ಅದರಲ್ಲಿ ಸೌಜನ್ಯಳ ಕಥೆಯು ಮೆಚ್ಚುಗೆ ವಿಭಾಗದಲ್ಲಿ ಆಯ್ಕೆಯಾಗಿದೆ. "ಪ್ರಥಮ ಹಾಗೂ ಮೆಚ್ಚುಗೆ ವಿಭಾಗಕ್ಕೆ ಆಯ್ಕೆಯಾದ ಕಥೆಗಳಿಗೆ ಆಕರ್ಷಕ ಬಹುಮಾನ, ಪ್ರಮಾಣಪತ್ರ ಹಾಗೂ ಗೌರವ ಪ್ರತಿಗಳನ್ನು ನೀಡಲಾಗುತ್ತದೆ ಹಾಗೂ 25




ಕಥೆಗಳನ್ನು ಒಳಗೊಂಡಂತೆ 'ರೈನ್‌ಬೋ' ಎಂಬ ಕಥಾ ಸಂಕಲನ ಹೊರತರಲಾಗುತ್ತಿದೆ" ಎಂದು ಸಂಪಾದಕರಾದ ಅನಂತ ಕುಣಿಗಲ್ ಅವರು ತಿಳಿಸಿದ್ದಾರೆ. ಸೌಜನ್ಯ ಬರೆದ 'ಒಂದು ಲೋಟ ನೀರಿನ ಕಥೆ'ಯು ಈಗಾಗಲೇ ಹಂಪಿ ಟೈಮ್ಸ್‌ನ 'ಸ್ಟುಡೆಂಟ್ ಕಾಲಂ'ನಲ್ಲಿ ಪ್ರಕಟವಾಗಿತ್ತು. ಶಾಲೆಯ ವಿದ್ಯಾರ್ಥಿನಿಯ ಕಥೆ ರಾಜ್ಯ ಮಟ್ಟದ ಕಥಾ ಸ್ಪರ್ಧೆಗೆ ಆಯ್ಕೆಯಾಗಿದ್ದಕ್ಕೆ ಶಾಲೆಯ ಮುಖ್ಯಗುರು ಗಳಾದ ಎಂ. ಮಂಜುನಾಥ ಹಾಗೂ ಎಲ್ಲಾ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರು ಅಭಿನಂದಿಸಿದ್ದಾರೆ.

> ಹಂಪಿ ಟೈಮ್ಸ್ ಪತ್ರಿಕೆ ನನ್ನ ಬರವಣಿ ಗೆಗೆ ಮೊದಲ ವೇದಿಕೆ ಯಾಗಿತ್ತು. ಶಿಕ್ಷಕರಾದ ಆರ್.ಬಿ. ಗುರುಬಸವರಾಜ ಇವರು ನನ್ನ ಕಥೆಗಳಿಗೆ ಮಾರ್ಗದರ್ಶನ ಮಾಡಿದರು. ಅವರ ಪ್ರೇರಣೆಯಿಂದ ಕಥೆ ಬರೆಯುವುದನ್ನು ರೂಢಿಸಿಕೊಂಡೆ. ನನ್ನ ಕಥೆ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದು ಖುಷಿ ತಂದಿದೆ. ಮಾರ್ಗದರ್ಶನ ಮಾಡಿದ ಹಾಗೂ ಅವಕಾಶ ನೀಡಿದ ಎಲ್ಲರಿಗೂ ಧನ್ಯವಾದಗಳು.
>
> – ಎಸ್.ಎಂ. ಸೌಜನ್ಯ. 9ನೇ ತರಗತಿ. ಸರ್ಕಾರಿ ಪ್ರೌಢಶಾಲೆ. ಬಸರಕೋಡು.



# ಯೂರಿಯಾ ಲಭ್ಯ: ರೈತರಿಗೆ ಆತಂಕ ಬೇಡ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ರೈತರು ಊಹಾಪೋಹಗಳಿಗೆ ಕಿವಿಗೊಡಬೇಡಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ 18 ಹೋಬಳಿಗಳಲ್ಲಿ ಉತ್ತಮ ಮಳೆಯಾಗಿದ್ದು, 15 ಹೋಬಳಿಗಳಲ್ಲಿ ಪ್ರಮುಖ



ವಾಗಿ ಮೆಕ್ಕೆಜೋಳ ಬಿತ್ತನೆಯಾಗಿರುತ್ತದೆ. ಪ್ರತಿ ವರ್ಷ 1.98 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಯಾಗುತ್ತಿದ್ದು, ಈ ವರ್ಷ ಮುಂಗಾರಿನಲ್ಲಿ 2.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಹಾಲಿ ಮೆಕ್ಕೆಜೋಳ ಬೆಳೆಯಲ್ಲಿ ಯೂರಿಯಾ ರಸಗೊಬ್ಬರವನ್ನು ಮೇಲು ಗೊಬ್ಬರವಾಗಿ ನೀಡಲಾಗುತ್ತಿದ್ದು, ಹೆಚ್ಚಿನ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯ ಬಿತ್ತನೆಯಾಗಿರುವುದರಿಂದ ಯೂರಿಯಾ ರಸಗೊಬ್ಬರದ ಹೆಚ್ಚಿನ ಬೇಡಿಕೆ ಇರುವ ಹಿನ್ನೆಲೆಯಲ್ಲಿ ಏಪ್ರಿಲ್ ಮಾಹೆಯಿಂದ ಜುಲೈ ಮಾಹೆಯವರೆಗೆ 26,293 ಮೆಟ್ರಿಕ್ ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಯಿದ್ದು, ಇಲ್ಲಿಯವರೆಗೆ 30,059 ಮೆಟ್ರಿಕ್ ಟನ್ ಯೂರಿಯಾ ಗೊಬ್ಬರ ಸರಬರಾಜಾಗಿರುತ್ತದೆ. ಈಗಾಗಲೇ ಬೇಡಿಕೆಗಿಂತ ಹೆಚ್ಚಿನ ಅಂದಾಜು 4,000 ಮೆಟ್ರಿಕ್ ಟನ್‌ಗಳಷ್ಟು ಯೂರಿಯಾ ರಸಗೊಬ್ಬರ ಸರಬರಾಜಾಗಿರುತ್ತದೆ. ಮುಂದಿನ 12 ದಿನಗಳೊಳಗೆ 2,500 ಮೆಟ್ರಿಕ್ ಟನ್‌ಗಳಷ್ಟು ಯೂರಿಯಾ ರಸಗೊಬ್ಬರವು ವಿವಿಧ ಸರಬರಾಜು ಕಂಪನಿಗಳಿಂದ ಪೂರೈಕೆಯಾಗಲಿದೆ. ಆದ್ದರಿಂದ ರೈತರು ಯಾವುದೇ ಉಹಾಪೋಹಾಗಳಿಗೆ ಕಿವಿ ಕೊಡಬಾರದೆಂದು ಮನವಿ ಮಾಡಲಾಗಿದೆ. ಹೆಚ್ಚಿನ ದರದಲ್ಲಿ ಮಾರಾಟಗಾರರು ಮಾರಾಟ ಮಾಡಿದಲ್ಲಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಕ್ಕೆ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ದೂರು ನೀಡಬಹುದು. ರೈತರು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿ.ಎ.ಪಿ ರಸಗೊಬ್ಬರಗಳನ್ನು ಸಹ ಮೆಕ್ಕೆಜೋಳದ ಬೆಳೆಗೆ ಬಳಸಬಹುದೆಂದು ರೈತರಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಹಾಗೂ ಪ್ರಗತಿ ಪರಿಶೀಲನಾ ಸಭೆ | ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

# ಹೈಸ್ಕೂಲ್, ಪಿಯು ಕಾಲೇಜ್‌ಗಳಲ್ಲಿ ಜಾಗೃತಿ ಹೆಚ್ಚಲಿ

### ಜಿಲ್ಲೆಯಲ್ಲಿ ಬೇಟಿ ಬಚಾವೋ-ಬೇಟಿ ಪಡಾವೋ ಯೋಜನೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಲಿ





**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಯ ಕುರಿತು ಹೆಚ್ಚಾಗಿ ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಗುರುವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪೊಲೀಸ್ ಇಲಾಖೆಯಿಂದ ಗ್ರಾಮ ಸಭೆಗಳಲ್ಲಿ, ಶಿಕ್ಷಣ ಇಲಾಖೆ ವತಿಯಿಂದ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಗಳಲ್ಲಿಯೂ ಸಹ ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಯ ಕುರಿತು ಅರಿವು ಮೂಡಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಇತರೆ ಇಲಾಖೆಗಳ ವಸತಿ ನಿಲಯಗಳಲ್ಲಿ ಮಕ್ಕಳಿಗೆ ಬಾಲ್ಯವಿವಾಹ ಹಾಗೂ ಪೋಕ್ಸೋ ಕಾಯ್ದೆ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಬೇಕು. ಇಲಾಖೆಗಳು ಮತ್ತು ವಿವಿಧ ಸಂಘ-ಸಂಸ್ಥೆಗಳ ಸಹಕಾರ ಪಡೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಬೇಟಿ ಬಚಾವೋ-ಬೇಟಿ ಪಡಾವೋ ಯೋಜನೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಸೆಯಲ್ಲಿ ಲಿಂಗಾನುಪಾತ ಕಡಿಮೆ ಇರುವ ತಾಲೂಕು ಹಾಗೂ ಗ್ರಾಮ ಪಂಚಾಯತ್‌ಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು.

ಜಿಲ್ಲೆಯಲ್ಲಿ 6 ವರ್ಷದೊಳಗಿನ ಮಕ್ಕಳ ಕುಂಠಿತ ಬೆಳವಣಿಗೆ, ತೂಕ ನಿಯಂತ್ರಣ ಅಪೌಷ್ಠಿಕತೆ, ರಕ್ತಹೀನತೆ ತಡೆಗಟ್ಟುವಿಕೆ ಕುರಿತಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ >>4

# ಗಣಿ ಬಾಧಿತ ಗ್ರಾಮಗಳಲ್ಲಿ ತೋಟಗಾರಿಕೆ ಚಟುವಟಿಕೆ ರೈತರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಸಮಗ್ರ ಗಣಿ ಪರಿಸರ ಪುನಶ್ಚೇತನ ಯೋಜನೆಯಡಿ, ಹೊಸಪೇಟೆ ತಾಲೂಕಿನ ಗಣಿಭಾದಿತ 58 ಗ್ರಾಮಗಳಲ್ಲಿ ತೋಟಗಾರಿಕೆ ಚಟುವಟಿಕೆಗಳನ್ನು ಪ್ರಾರಂಭಿಸಲು ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೊಟಗಾರಿಕೆ ಇಲಾಖೆಯ ಉಪನಿರ್ದೇಶಕ ಪಿ.ಜಿ.ಚಿದಾನಂದಪ್ಪ ತಿಳಿಸಿದ್ದಾರೆ.

ತೋಟಗಾರಿಕೆ ಚಟುವಟಿಕೆಗಳಾದ ವೈಯಕ್ತಿಕ ನೀರು ಸಂಗ್ರಹಣ ಘಟಕ, ಈರುಳ್ಳಿ ಸಂಗ್ರಹಣ ಘಟಕ, ಫಾರಂ ಗೇಟ್ ಪ್ಯಾಕ್ ಹೌಸ್ ಹಾಗೂ ಪ್ರದೇಶ ವಿಸ್ತರಣೆಯ ಡ್ರಾಗನ್ ಪ್ರೂಟ್, ದಾಳಿಂಬೆ, ಮಾವು, ತೆಂಗು, ನಿಂಬೆಯ ತೋಟಗಾರಿಕೆ ಚಟುಟಿಕೆಗಳನ್ನು ಪ್ರಾರಂಭಿಸುವ ಆಸಕ್ತ ರೈತರು ಹೊಸಪೇಟೆ ತೋಟಗಾರಿಕೆ ಇಲಾಖೆಯ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿ ಅರ್ಜಿಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಆಯಾ ಹೋಬಳಿಯ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಾದ, ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಹೊಸಪೇಟೆ ಮೊ.9164297220, ಮರಿಯಮ್ಮನಹಳ್ಳಿ ಮೊ.7204888978, ಕಮಲಾಪುರ ಮೊ.8123465548, ಹೊಸಪೇಟೆ ಸಹಾಯಕ ತೋಟಗಾರಿಕೆ ನಿರ್ದೇಶಕ ಮೊ.9901555690 ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮೊ.8310291867 ಈ ಸಂಖ್ಯೆಗಳಿಗೆ ಕರೆ ಮಾಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯಂತ್ರಚಾಲಿತ ತ್ರಿ-ಚಕ್ರ ವಾಹನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024-25ನೇ ಸಾಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಕೂಡ್ಲಿಗಿ ವಿಧಾನ ಕ್ಷೇತ್ರದ ವ್ಯಾಪ್ತಿಯ ವಿಕಲಚೇತನರಿಗೆ 95 ಯಂತ್ರಚಾಲಿತ ತ್ರಿ-ಚಕ್ರ ವಾಹನ ಸೌಲಭ್ಯ ಒದಗಿಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಕೂಡ್ಲಿಗಿಯ ದೈಹಿಕ ಅರ್ಹ ವಿಕಲಚೇತನ ಫಲಾನುಭವಿಗಳು ಮೇಲ್ಕಾಣಿಸಿದ ಯೋಜನೆ ಸೌಲಭ್ಯ ಪಡೆಯಲು ಅರ್ಹ ವಿಕಲಚೇತನರು ಅವಶ್ಯಕ ದಾಖಲೆಗಳೊಂದಿಗೆ ಅರ್ಜಿಗಳನ್ನು ಆಫ್‌ಲೈನ್ ಮೂಲಕ ಜು.18. ರಿಂದ ಜು.24 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಚೌಡೇಶ-8217626361, ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರು, ತಾಲೂಕು ಪಂಚಾಯತಿಯಲ್ಲಿ ಕೂಡ್ಲಿಗಿ ಇವರನ್ನು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಅಗಾಫೆ ಎಜಿ ಪ್ರಾರ್ಥನಾಲಯ ಎದುರು ರಸ್ತೆ, ರವಿ ಸಿವಿಲ್ ಎಂಜಿನಿಯರ್ ಕಟ್ಟಡ, ಅಮರಾವತಿ, ಹೊಸಪೇಟೆ ಇವರನ್ನು ಕಚೇರಿಯ ಅವಧಿಯಲ್ಲಿ ಸಂಪರ್ಕಿಸಬೇಕೆಂದು ವಿಜಯನಗರ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜು.19 ರಂದು ಜೆಸ್ಕಾಂ ನಗರ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ನಗರ ಉಪವಿಭಾಗ 1 ಮತ್ತು 2 ರ ಗ್ರಾಹಕರ ಕುಂದುಕೊರತೆ ಹಾಗೂ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ತಿಂಗಳು ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಅದೇ ರೀತಿ ಮಾಹೆಯ ಸಂವಾದ ಸಭೆಯನ್ನು ಜು.19 ರಂದು ಮಧ್ಯಾಹ್ನ 4 ಗಂಟೆಯಿಂದ 5 ಗಂಟೆಯವರೆಗೆ ಹೊಸಪೇಟೆ ನಗರದ ಉಪವಭಾಗ-1 ರ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ಆಯೋಜಿಸಲಾಗಿದೆ. ದಿನಾಂಕದಂದು ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆಗಳು ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಸಲ್ಲಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ನಗರ ಉಪವಿಭಾಗ-1 ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಹಂಪಿ ಟೈಮ್ಸ್
HAMPI TIMES

## ಶರಾಶಿಯ ಪುರಾಣ

ಉದ್ದನೆಯ ಕೂದಲು, ಜಡೆ ಹಾಕಿ ಹೂ ಮುಡಿದರೆ ನೋಡುಗರು ಆಹಾ! ಎನ್ನುವಂತಿರಬೇಕು ಎಂದು ಬಯಸುವರು ಹೆಣ್ಮಕ್ಕಳು. ಮತ್ತೆ ಕೆಲುವೊಂದು ಹೆಣ್ಮಕ್ಕಳಿಗೆ ಜಡೆ ಹಾಕಿ ಹೂ ಮುಡಿಯುವುದೆಂದರೆ ಬಹಳ ಇಷ್ಟದ ವಿಷಯ.



ಚಿಕ್ಕ ಹುಡುಗಿಯರಂತು ಶಾಲೆಗೆ ಹೋಗುವಾಗಲೇ ಉದ್ದ ಜಡೆ ಬೇಕು, ಮೊಗ್ಗಿನ ಜಡೆ ಬೇಕು ಎಂದು ಆಸೆ ಪಡುವರು. ಹತ್ತನೆ ತರಗತಿಯವರೆಗೆ ಎರಡು ಜಡೆಗಾಗಿ ಕೂದಲು ಉದ್ದವಿಟ್ಟುಕೊಂಡು ಹತ್ತನೆ ತರಗತಿ ಮುಗಿಯುತ್ತಿದ್ದಂತೆ ಹಲವು ಹುಡುಗಿಯರ ಕೂದಲಿಗೆ ಬೀಳುವುದು ಕತ್ತರಿ.

ಬೇರೊಬ್ಬರ ಕೂದಲ ನೋಡಿದಾಗ ನಮ್ಮ ಕೂದಲೊಮ್ಮೆ ಸವರಿಕೊಳ್ಳುತ್ತೇವೆ. "ಸಾಮಾನ್ಯವಾಗಿ ಗೃಹಿಣಿಯರು ಮಕ್ಕಳ ಶಾಲೆಗೆ ಕಳುಹಿಸುವ ಅವಸರದಲ್ಲಿ ಕೂದಲು ಬಾಚಲು ಮರೆಯುತ್ತಾರೆ. ಯಾರು ನೋಡ್ತಾರೆ ನಮ್ಮ ಅಂದುಕೊಂಡು ಕೂದಲ ಗಂಟು ಹಾಕಿಕೊಂಡಿರುವುದೆ ಹೆಚ್ಚು". ಒಮ್ಮೊಮ್ಮೆ! ಕೂದಲು ಸೊಂಪಾಗಿ ಬೆಳೆಯಲು ಏನೇನೊ ಹೊಸ ಹೊಸ ಪ್ರಯೋಗಕ್ಕೆ ಕೂದಲ ಒಳಪಡಿಸುತ್ತೇವೆ. ಆದರೂ, ಕೂದಲು ಇದ್ದಷ್ಟೇ ಇರುತ್ತೆ ಕೂದಲ ಆರೈಕೆ ಮಾಡುವಲ್ಲಿ ನಮ್ಮ ಸಮಯ ವ್ಯರ್ಥವಾಗಿರುತ್ತದೆ.

ಕಪ್ಪು ಕೂದಲಿನ ಮಧ್ಯ ಒಂದು ಬಿಳಿ ಕೂದಲು ಕಾಣಿಸಿದರು ನನಗೆ ಇಷ್ಟು ಬೇಗ ವಯಸ್ಸಾಯಿತಾ? ಅಂದುಕೊಳ್ಳುತ್ತೇವೆ. ಜಡೆ ಹೆಣೆಯುವಾಗ ಕಪ್ಪು ಕೂದಲಿನಿಂದ ಮರೆಮಾಚಲು ನೋಡುತ್ತೇವೆ ಆದರು ಆ ಬಿಳಿ ಕೂದಲು ನಮ್ಮಿಂದ ತಪ್ಪಿಸಿಕೊಂಡು ಬಿಡುತ್ತದೆ. ದಿನ ಕಳೆದಂತೆ ಎಲ್ಲ ಕೂದಲು ಬೆಳ್ಳಗಾದರೆ ಕಷ್ಟವೆಂದು ಕೂದಲಿಗೆ ಬಣ್ಣ ಹಚ್ಚಲು ಆರಂಭಿಸುತ್ತೇವೆ. ಇಷ್ಟಾದರು ಸುಮ್ಮನಿರದೆ ಪಕ್ಕದ ಮನೆಯವರು ಹೇಳಿದರು, ಗೆಳತಿ ಹೇಳಿದಳು ಎಂದು ಕೂದಲ ಆರೈಕೆಗೆ ಹೊಸ ಹೊಸ ಪ್ರಯೋಗಮಾಡುತ್ತಲೆ ಇರುತ್ತೇವೆ.

– ಸುವರ್ಣಾ ಭಟ್ಟ.

## ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಊಟದ ತಟ್ಟೆ ವಿತರಣೆ



ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಸಮಾಜ ಸೇವಕಿ ರಶ್ಮಿ ರಾಜಶೇಖರ್ ಹಿಟ್ನಾಳ್ ಅವರು ಗುರುವಾರ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಊಟದ ತಟ್ಟೆಗಳನ್ನು ವಿತರಿಸಿದರು. ಗ್ರಾಪಂ ಅಧ್ಯಕ್ಷರು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಳೆಯ ವಿದ್ಯಾರ್ಥಿಗಳು, ಶಿಕ್ಷಕರು ಇದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಅಡುಗೆಯಿಂದ ಹಿಡಿದು ಧರಿಸುವ ಬಟ್ಟೆಯವರೆಗೂ ಅವರವರ ಅಭಿರುಚಿ, ಅಭಿಪ್ರಾಯಗಳನ್ನು ಗೌರವಿಸಿ. ಪರಸ್ಪರ ಟೀಕಿಸುವ, ವಿರೋಧಿಸುವ ಮನೋಭಾವ ಬೇಡ. ಅತ್ತೆ, ಸೊಸೆ ನಡುವೆ ಆಪ್ತವಾದ ಅಂತರ ಕಾಪಾಡಿಕೊಳ್ಳಿ. ವಿಶೇಷವಾಗಿ ಅತ್ತೆ ಸೊಸೆಯನ್ನು ಮಗಳಂತೆ ನೋಡಿಕೊಳ್ಳಬೇಕು, ಹಾಗೆಯೇ ಸೊಸೆ ಕೂಡ ಅತ್ತೆಯನ್ನು ತನ್ನ ತಾಯಿಯಂತೆ ನೋಡಿ ಕೊಳ್ಳಬೇಕು.**

# ಅತ್ತೆ ಸೊಸೆ ಒಂದಾಗಿದ್ದರೆ ಮನೆಯೇ ಸ್ವರ್ಗ



ಸಾಮಾನ್ಯವಾಗಿ ಅತಿ ಸೊಸೆ ಎಂದರೆ ಜಗಳದ ಬಗ್ಗೆ ಯೋಚನೆ ಬರುತ್ತದೆ. ನಮ್ಮ ಅತ್ತೆ ನನಗೆ ದಿನಾ ಬೆಳಿಗ್ಗೆ ಮತ್ತು ಸಾಯಂಕಾಲ ಒಂದು ಕಪ್ ಬಿಸಿ ಬಿಸಿ ಟೀ ಮಾಡಿಕೊಡುತ್ತಾರೆ ಇದು ನಿಜ...

ನಾನು ಕೂಡ ಅವರನ್ನು ಅಮ್ಮನ ಹಾಗೆ ನೋಡಿಕೊಳ್ಳುತ್ತೇನೆ .. ಇದು ನನಗೆ ಕಲಿಸಿಕೊಟ್ಟದ್ದು ನನ್ನ ತಾಯಿ. ಆದರೆ ಹಿಂದಿನ ಕಾಲದಲ್ಲಿ ಸಂಬಂಧಗಳನ್ನು ಹುಡುಕುವಾಗ ಹುಡುಗನ ಜೊತೆಗೆ ಹುಡುಗನ ತಾಯಿಯ ಬಗ್ಗೆ ಹೆಚ್ಚು ಚೌಕಾಶಿ ಮಾಡುತ್ತಿದ್ದರಂತೆ. ಅತ್ತೆ ಚೆನ್ನಾಗಿದ್ದರೆ ಮಗಳು ಪುಣ್ಯ ಮಾಡಿದ್ದಾಳೆ ,ಸಂಸಾರ ಚೆನ್ನಾಗಿ ನಡೆಯುತ್ತದೆ ಎನ್ನುವ ಒಂದು ಬಲವಾದ ನಂಬಿಕೆ ಎಲ್ಲರಲ್ಲೂ ಇತ್ತು. ಆಗಿನ ಕಾಲ ಘಟ್ಟ ಹಾಗೆಯೆ ಇತ್ತು.

ದಿನಾ ಬೆಳಗಾದರೆ ಅತ್ತೆ ಸೊಸೆ ಜಗಳ, ಕಿರಿಕಿರಿ ಕಿರುಕುಳ.... ಸೊಸೆಯ ಕೊಲೆ ಹೀಗೆ ಒಂದೊಂದು ಘಟನೆಗಳನ್ನು ಕೇಳುತ್ತಿದ್ದರೆ ಅಯ್ಯೊ ಮದುವೆ ಎಂದರೆ ಹೀಗೇನೆ? ನಮ್ಮ ಸ್ವಾತಂತ್ರ ಹೊಗಿ ಬಿಡುತ್ತದೆಯೇ? ಎಂಬೆಲ್ಲ ಯೋಚನೆಗಳು ಬರುತ್ತಿದ್ದವು.

ಅತ್ತೆಯ ಆದೇಶ ಇಲ್ಲದೆ ಸೊಸೆಯಂದಿರು ಏನು ಮಾಡುವ ಹಾಗಿರಲಿಲ್ಲ,ಊಟ ಬಿಡಿ ಒಂದು ಕ್ಲಾಸ್ ನೀರು ಕೂಡ ಕುಡಿಯುವ ಹಾಗಿರಲಿಲ್ಲವಂತೆ.... ಇದಕ್ಕೆಲ್ಲ ಕಾರಣ ಎಲ್ಲೋ ಒಂದು ಕಡೆ ಸಂಬಂಧಗಳ ಮಹತ್ವವಾಗಲಿ, ಆತ್ಮೀಯತೆಯಾಗಲಿ ಹಾಗೂ ಅನಕ್ಷರತೆ ಕೂಡ ಇರಬಹುದು.

ಎಲ್ಲೊ ಒಂದು ಕಡೆ ಅತ್ತೆ ಯಾದವಳು ಕೂಡ ಒಂದು ಕಾಲದಲ್ಲಿ ಸೊಸೆಯ ಸ್ಥಾನದಲ್ಲಿದ್ದಾಗ ಅನುಭವಿಸಿದ ನೋವಿನಿಂದ , ಮುಂದೆ ತಾನು ಅತ್ತೆಯಾದಾಗ ಇದೆ ದರ್ಪ ನಡೆಸುವ ಮನಸ್ಥಿತಿ ಮಾಡಿಕೊಂಡಿರಬಹುದು. ಆದರೆ ಈಗ ಕಾಲ ಬದಲಾಗಿದೆ, ಅತ್ತೆ ಸೊಸೆ ಜಗಳಕ್ಕೆ ಒಂದು ಹಂತದಲ್ಲಿ ತೆರೆ ಬಿದ್ದಿದೆ ಎನ್ನಬಹುದು.

ಪ್ರಗತಿಯತ್ತ ಸಾಗುತ್ತಿರುವ ದೇಶಗಳಲ್ಲಿ ಹೆಣ್ಣು ಮಕ್ಕಳ ಪಾತ್ರ ಕೂಡ ಅಷ್ಟೇ ಮುಖ್ಯವಾಗಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮಹತ್ವ ಸಿಕ್ಕಾಗ, ಹೆಣ್ಣುಮಕ್ಕಳ ಜೀವನ ಶೈಲಿ ಬದಲಾಗುತ್ತ ಬಂತು.

ಮನೆಯಲ್ಲಿ ಅತ್ತೆ ಸೊಸೆ ಸಂಬಂಧವು ಅತ್ಯಂತ ಸೂಕ್ಷ್ಮವಾದದ್ದು ಎನ್ನಬಹುದು. ಇವರಿಬ್ಬರಲ್ಲೂ ಭಿನ್ನಾಭಿಪ್ರಾಯಗಳು ಕಂಡುಬಂದರೆ ಮನೆಯ ಶಾಂತಿ ಹಾಳಾಗುವುದಂತೂ ಖಚಿತ. ಸೊಸೆ ಮತ್ತು ಅತ್ತೆಯ ನಡುವಿನ ಬಾಂಧವ್ಯವು ಕೆಲವೊಮ್ಮೆ ಕುಟುಂಬದಲ್ಲಿ ಎಲ್ಲಕ್ಕಿಂತ ದುರ್ಬಲವಾಗಿರುತ್ತದೆ. ಸಾಮಾನ್ಯವಾಗಿ ಅವರು ಒಟ್ಟಿಗೆ ಇರುವುದಿಲ್ಲ ಮತ್ತು ಆಗಾಗ್ಗೆ ವಿವಾದ ಮತ್ತು ಕ್ಷುಲ್ಲಕ ವಿಷಯಗಳ ಬಗ್ಗೆ ಜಗಳವಾಡುತ್ತಾರೆ, ಇದು ಇಡೀ ಕುಟುಂಬದ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತ, ಯಾವುದೇ ಪ್ರಗತಿ ಕಾಣುವುದಿಲ್ಲ, ಗಂಡು ಮಕ್ಕಳ ಮೇಲೆ ಅದರಲ್ಲೂ ವಿಶೇಷವಾಗಿ ಮಕ್ಕಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರಿ ಮಕ್ಕಳು ಅನ್ಯೆತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಉಂಟು.

ಆದ್ದರಿಂದ ಮದುವೆಯಾಗಿ ಹೊಸ ಮನೆ ಸೇರುವ ಮಹಿಳೆ ಹೊಸ ಬದುಕಿನ ಬಗ್ಗೆ ಎಷ್ಟು ಕಾಳಜಿ, ಕನಸುಗಳನ್ನು ಹೊರುತ್ತಾಳೋ ಅಷ್ಟೇ ಅತ್ತೆಯಾದವಳು ಕೂಡ ಸೊಸೆಯನ್ನು ಪ್ರೀತಿಯಿಂದ ಸ್ವಾಗತಿಸಲು ಸಿದ್ಧವಾಗಬೇಕು. ಅತ್ತೆಯ ಮನಸು ಗೆಲ್ಲುವುದಷ್ಟೇ ಅಲ್ಲ, ಸೊಸೆಯನ್ನು ಕೂಡ ಅತ್ತೆ ಒಲೈಸಬೇಕು.

ಏಕೆಂದರೆ ಬದಲಾದ ಜೀವನಶೈಲಿ, ಕೌಟುಂಬಿಕ ವ್ಯವಸ್ಥೆಯಲ್ಲಿ ಒಂದಷ್ಟು ಬದಲಾವಣೆಗಳಿಗೆ ಹೊಂದಿಕೊಳ್ಳಬೇಕು. ಸೊಸೆಯಲ್ಲ ಮಗಳು, ಸೊಸೆಯನ್ನು ಮಗಳಾಗಿ ನೋಡಿಕೊಳ್ಳುತ್ತೇನೆ ಎನ್ನುವವರಲೆಲ್ಲ, ಮಗಳಂತೆ ಸ್ವೀಕರಿಸುವುದಿಲ್ಲ. ಅತ್ತೆಯನ್ನು ಅಮ್ಮನಂತೆ ನೋಡಿ ಕೊಳ್ಳು ತ್ತೇನೆ ಎನ್ನುವವರು ಕೂಡ ಹಾಗೆ ನೋಡಿ ಕೊಳ್ಳುವುದಿಲ್ಲ. ಹೀಗಾಗಿ ಸಂಬಂಧಗಳನ್ನು ಬದಲಿಸಬೇಕಿಲ್ಲ. ಆದರೆ ಆಯಾ ಸಂಬಂಧಕ್ಕೆ ಕೊಡುವ ಗೌರವ ನೀಡಿ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

ವಯಸ್ಸೇ ಮುಖ್ಯವಲ್ಲ ಸೊಸೆ ತಾನು ಚಿಕ್ಕವಳು ಎಂದಾಕ್ಷಣ ಯಾವ ತಪ್ಪಾದರೂ ಮಾಡಬಹುದು ಎಂಬುದು ತಪ್ಪು. ಇಬ್ಬರಲ್ಲೂ ಹೊಂದಾಣಿಕೆ ಅತ್ಯಗತ್ಯ, ಅತ್ತೆ ಕೂಡ ಸೊಸೆಯನ್ನು ಮಗಳಂತೆ ತಿಳಿದು ತಿದ್ದಿ ತಿಳಿ ಹೇಳಿ ಕ್ಷಮಿಸುವ ಭಾವನೆ ಇರಬೇಕು .

ಅತ್ತೆ ತಾನು ಹಿರಿಯಳು ಎನ್ನುವ ಕಾರಣಕ್ಕೆ ಏನಾದರೂ ಹೇಳಬಹುದು ಅಥವಾ ತನ್ನ ಹಳೆಯ ಅನುಭವ, ಬದುಕನ್ನು ಸೊಸೆಯ ಮೇಲೆ ಹೇರಬಹುದು ಎನ್ನುವುದೇ ತಪ್ಪು. ವಯಸ್ಸು ಅಥವಾ ಅನುಭವವನ್ನೇ ಮನಸ್ಸಿನಲ್ಲಿಟ್ಟುಕೊಂಡು ಒಬ್ಬರಿಗೊಬ್ಬರು ಅಭಿಪ್ರಾಯ ಹೇರಬೇಡಿ. ಅಭಿಪ್ರಾಯಗಳನ್ನು ಗೌರವಿಸಿ ಅತ್ತೆ ಅಥವಾ ಸೊಸೆ ಯಾರೇ ಆಗಿರಲಿ, ಇಬ್ಬರಿಗೂ ಅವರದ್ದೇ ಆದ ಬದುಕು ಇದೆ. ವ್ಯಕ್ತಿತ್ವ, ಅಭಿಪ್ರಾಯಗಳಿವೆ.

ಅಡುಗೆಯಿಂದ ಹಿಡಿದು ಧರಿಸುವ ಬಟ್ಟೆಯವರೆಗೂ ಅವರವರ ಅಭಿರುಚಿ, ಅಭಿಪ್ರಾಯಗಳನ್ನು ಗೌರವಿಸಿ. ಪರಸ್ಪರ ಟೀಕಿಸುವ, ವಿರೋಧಿಸುವ ಮನೋಭಾವ ಬೇಡ. ಅತ್ತೆ, ಸೊಸೆ ನಡುವೆ ಆಪ್ತವಾದ ಅಂತರ ಕಾಪಾಡಿಕೊಳ್ಳಿ .

ಸಂಗಾತಿಗಳ ನಡುವೆ ಕೂಡ ಒಂದು ಹಂತದ ಅಂತರ ಅಥವಾ ಸ್ವಾತಂತ್ರ್ಯ ಅಗತ್ಯ. ಅಂಥದ್ರಲ್ಲಿ ಅತ್ತೆ ಹಾಗೂ ಸೊಸೆ ನಡುವೆ ಅಂತರ ಬೇಡವಾ? ಕೆಲವು ಸಂಗತಿಗಳನ್ನು ಪರಸ್ಪರ ಪ್ರಶ್ನಿಸಲೇಬೇಡಿ. ರೂಢಿಸಿಕೊಂಡ ಆಚರಣೆ, ಬೆಳೆಸಿಕೊಂಡ ಹವ್ಯಾಸಗಳು ಅವರವರಿಗೆ ಖುಷಿ ಕೊಡುತ್ತಿದೆ. ಅದನ್ನು ಪ್ರಶ್ನಿಸಬೇಡಿ. ಅವರ ಪಾಡಿಗೆ ಅವರು ಅವುಗಳನ್ನು ಮುಂದುವರಿಸಲು ಬಿಡಿ. ಇಬ್ಬರ ನಡುವೆ ನಿರಾಳ ವಾತಾವರಣ ಇರಲಿ.

ಅತ್ತೆ ಒಪ್ಪುವುದಿಲ್ಲ ಎನ್ನುವ ಬೇಸರ, ಸೊಸೆಗೆ ಇಷ್ಟವಿಲ್ಲ ಎನ್ನುವ ದೂರು ನಿಮ್ಮೊಳಗೆ ಬಾರದಿರಲಿ. ಸಮಾನ ಆಸಕ್ತಿಯತ್ತ ಗಮನ ನೀಡಿ ಆರಂಭದ ದಿನಗಳಲ್ಲಿ ಸೊಸೆಗೆ ಹೊಸ ಮನೆ, ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಬಹುದು.

ಅಂತಹ ಸಮಯದಲ್ಲಿ ಅತ್ತೆಯಾದವಳು ಸೊಸೆಗೆ ಸಹಕರಿಸಬೇಕು, ಅಡುಗೆ ಮಾಡುವುದರಿಂದ ಹಿಡಿದು ಎಲ್ಲಾ ಕರ್ತವ್ಯಗಳನ್ನು ನಿಭಾಯಿಸಲು ಅವಕಾಶ ಕೊಡಬೇಕು ಹಾಗೆ ಅತ್ತೆಯ ಮಾರ್ಗದರ್ಶನ ಕೂಡ ಅಷ್ಟೇ ಮುಖ್ಯವಾಗಿದೆ. ಸೊಸೆಯ ಆಸಕ್ತಿ, ಇಷ್ಟಗಳನ್ನು ತಿಳಿದುಕೊಳ್ಳಿ. ಹೆಚ್ಚು ಸಮಯ ಅವಳೊಂದಿಗೆ ಕಳೆಯಿರಿ. ಇಬ್ಬರಲ್ಲಿ ಇರುವ ಸಮಾನ ಆಸಕ್ತಿಯನ್ನು ಪರಸ್ಪರ ಗುರುತಿಸಿಕೊಂಡು ಮುಂದುವರಿಸಿ. ಒಬ್ಬರಿಗೊಬ್ಬರು ಪ್ರೋತ್ಸಾಹಿಸಿ. ಇದರಿಂದ ಇಬ್ಬರ ನಡುವೆ ಅರ್ಥ ಮಾಡಿಕೊಳ್ಳುವದು ಸುಲಭವಾಗುತ್ತದೆ.

ನಾನು ಅತ್ತೆ ಸೊಸೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಸ್ವಭಾವ ಬೇಡ ಸಾಮಾನ್ಯವಾಗಿ ಅತ್ತೆ ಸೊಸೆ ನಡುವೆ ಸಿಲುಕಿ ಪರದಾಡುವವರು ಮಾತ್ರ ಬಹುತೇಕ ಸಮಯದಲ್ಲಿ ಪುರುಷರೇ ಆಗಿರುತ್ತಾರೆ. ಮಗ ಕೈ ತಪ್ಪಿ ಹೋಗುತ್ತಿದ್ದಾನೆ ಎನ್ನುವ ಆತಂಕ ಅತ್ತೆಗೆ.

ಅತ್ತೆಯ ದೌರ್ಜನಕ್ಕೆ ಬಲಿಯಾಗಿ ಹೆಣ್ಣು ತನ್ನ ಆಸೆ ಆಕಾಂಕ್ಷೆಗಳೆಲ್ಲ ಬದಿಗೊತ್ತಿ ಗಂಡನೊಂದಿಗೆ ಸಹಕರಿಸದೆ ಇರುವುದು, ಇದರಿಂದ ದಾಂಪತ್ಯ ಜೀವನದಲ್ಲಿ ಬಿರುಕು ಉಂಟಾಗುವುದು ಸರ್ವೇಸಾಮಾನ್ಯ ಆಗಿ ಬಿಡುತ್ತದೆ. ಸೊಸೆಯಾಗಿ ಬಂದ ಹೆಣ್ಣು ಇದು ನನ್ನ ಕುಟುಂಬ, ಇಲ್ಲಿ ಇರುವ ಪ್ರತಿಯೊಬ್ಬ ಸಸ್ಯ ಸದಸ್ಯರು ನನ್ನವರು ಎಂಬುದನ್ನು ಮೊದಲು ಸ್ವೀಕಾರ ಮಾಡಿಕೊಳ್ಳಬೇಕು.

ಆರಂಭದಲ್ಲಿ ಹೊಸ ಕುಟುಂಬದ ವಾತಾವರಣದಲ್ಲಿ ಹೊಂದಿ ಕೊಳ್ಳಲು ಸಮಸ್ಯೆ ಆದರೂ ಕೂಡ ನಾವು ಅವರೊಂದಿಗೆ ಆತ್ಮೀಯತೆ ಯಿಂದ ಇದ್ದಾಗ ಕುಟುಂಬದ ಸಂಪೂರ್ಣ ಬೆಂಬಲ ನಮಗೆ ಸಿಕ್ಕು, ಮುಂದಿನ ದಿನಗಳಲ್ಲಿ ಕುಟುಂಬದ ಎಲ್ಲಾ ಕಾರ್ಯಗಳ ಮೇಲೆ ಹಿಡಿತ ಸಾಧಿಸಬಹುದು. ಕುಟುಂಬ ಸದಸ್ಯರು ಕೂಡ ನಮ್ಮ ಸೊಸೆಯನ್ನುನಮ್ಮಕುಟುಂಬ ಸದಸ್ಯೆಎಂಬುದನ್ನುಮರೆಯಬಾರದು, ಸೊಸೆಗೆ ಕೊಡುವ ಗೌರವಸ್ಥಾನ ಪ್ರೀತಿ ಎಲ್ಲರೂ ಕೊಡಬೇಕು. ಹಾಗೆ ಅವರ ಚಿಕ್ಕ ಚಿಕ್ಕ ತಪ್ಪುಗಳಿಗೆ ತಿದ್ದಿ ಧೈರ್ಯ ಹೇಳಿ ಅವರಿಗೆ ನಮ್ಮ ಮನೆಯ ಸಂಪ್ರದಾಯಗಳನ್ನು ಕಲಿಸಿಕೊಡಬೇಕು.

ತನ್ನ ತಂದೆ ತಾಯಿ ಇಡಿ ಕುಟುಂಬವನ್ನು ಬಿಟ್ಟು ಬಂದು ಹೊಸ ಜೀವನ ರೂಪಿಸಿಕೊಳ್ಳುವುದಕ್ಕೆ ಅವಳಿಗೆ ಕುಟುಂಬದ ಸರ್ವರ ಬೆಂಬಲ ಅಗತ್ಯವಾಗಿರುತ್ತದೆ, ಅದರಲ್ಲಿಯೂ ಗಂಡನಾದವನು ತನ್ನ ಹೆಂಡತಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಬೇಕು ಹಾಗೂ ಅಮ್ಮ ಮತ್ತು ಹೆಂಡತಿಗೆ ಸಮಾನ ಸ್ಥಾನ ನೀಡಬೇಕು.

ವಿಶೇಷವಾಗಿ ಅತ್ತೆ ಸೊಸೆಯನ್ನು ಮಗಳಂತೆ ನೋಡಿಕೊಳ್ಳಬೇಕು, ಹಾಗೆಯೇ ಸೊಸೆ ಕೂಡ ಅತ್ತೆಯನ್ನು ತನ್ನ ತಾಯಿಯಂತೆ ನೋಡಿ ಕೊಳ್ಳಬೇಕು. ಅತ್ತೆ ಸೊಸೆ ಇಬ್ಬರೂ ಕೂಡ ಆ ಮನೆಯ ಅವಿಭಾಜ್ಯ ಅಂಗ, ಅತ್ತೆ ಸೊಸೆ ಇಬ್ಬರು ಒಬ್ಬರಿಗೊಬ್ಬರು ಹೊಂದಿಕೊಂಡು ಜೀವನ ಮಾಡಿದರೆ ಇಡೀ ಕುಟುಂಬ ಆರೋಗ್ಯಕರವಾಗಿರುತ್ತದೆ. ಅಲ್ಲದೆ ಕುಟುಂಬದಲ್ಲಿರುವ ಮಕ್ಕಳು ಕೂಡ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಒಳ್ಳೆಯ ವಾತಾವರಣ ಸಿಗುತ್ತದೆ. ಹಿರಿಯರು ಕಿರಿಯರು ಎನ್ನುವಾಗ ಅವರ ಭಯ ಭಕ್ತಿ ಮಕ್ಕಳಲ್ಲಿ ಹೊಸ ಬರವಸೆಯನ್ನು ಹುಟ್ಟಿಸುತ್ತದೆ. ಕುಟುಂಬದ ಸಂಪೂರ್ಣ ಜವಾಬ್ದಾರಿ ಹಾಗೂ ಅಭಿವೃದ್ಧಿ ಅತ್ತೆ ಹಾಗೂ ಸೊಸೆ ಮೇಲೆ ಇದೆ ಎಂದರೆ ತಪ್ಪಿಲ್ಲ ,ಇಬ್ಬರ ಕುಟುಂಬವು ಹೌದು.

ಎಲ್ಲೋ ಒಂದು ಕಡೆ ಇಲ್ಲಿ ಸೊಸೆಯಂದಿರ ಪಾತ್ರ ಮುಖ್ಯವಾಗಿ ರುತ್ತದೆ, ಏಕೆಂದರೆ ಅತ್ತೆ ಇಷ್ಟು ದಿನಗಳಿಂದ ಕಷ್ಟ ಸುಖ ಎಲ್ಲವನ್ನು ಹೊತ್ತುಕೊಂಡು ಸಂಸಾರದ ಜವಾಬ್ದಾರಿ ನಿಭಾಯಿಸಿಕೊಂಡು ಬಂದಿರುತ್ತಾರೆ. ಈಗ ಅವರಿಗೆ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ಮಕ್ಕಳಿಗೆ ಶಿಕ್ಷಣ ಕೊಟ್ಟು ಒಳ್ಳೆಯ ಜೀವನ ರೂಪಿಸಿಕೊಟ್ಟಿರುತ್ತಾರೆ. ಇವರು ಕಷ್ಟಪಟ್ಟು ಕಟ್ಟಿದ ಸುಖಿ ಕುಟುಂಬವನ್ನು ಮುಂದುವರಿಸಿ ಕೊಂಡು ಹೋಗುವುದು ಸೊಸೆಯ ಜವಾಬ್ದಾರಿಯಾಗಿರುತ್ತದೆ.

ಇಂದಿನ ಸೊಸೆಯಂದರು ಎಷ್ಟೇ ವಿದ್ಯಾವಂತರು ಆಗಿದ್ದರೂ ಕೂಡ ಎಷ್ಟೇ ದೊಡ್ಡ ಹುದ್ದೆಗಳನ್ನು ನಿಭಾಯಿಸುತ್ತಿದ್ದರು ಕೂಡ, ಸೊಸೆ ಹೆಂಡತಿ, ಅಮ್ಮನ ಪಾತ್ರ ಅಷ್ಟೇ ಹೆಚ್ಚುಕಟ್ಟಾಗಿ ನಿಭಾಯಿಸಿದಾಗ ಮುಂದಿನ ಕುಟುಂಬ ಸುಖಿ- ಕುಟುಂಬವಾಗಲು ಸಾಧ್ಯ....

ಅತ್ತೆಯೊಂದಿಗೆ ಒಳ್ಳೆಯ ಒಡನಾಟ ಹೊಂದಿರಿ, ಒಬ್ಬರಿಗೊಬ್ಬರು ತಮ್ಮ ಸಿಕ್ಕ ದುಃಖಗಳನ್ನು ಹಂಚಿಕೊಳ್ಳಿ, ಒಟ್ಟೊಟ್ಟಿಗೆ ಶಾಪಿಂಗ್ ಮಾಡಿ, ಓಡಾಡಿ ಸಂಭ್ರಮಿಸಿ ಅದರ ಸಂತೋಷವೇ ಬೇರೆ ಹಾಗೂ ವಿಶೇಷವಾಗಿ ಉದ್ಯೋಗಸ್ಥ ಮಹಿಳೆಯರು ಉದ್ಯೋಗಕ್ಕೆ ಹೊರಗೆ ಹೋದಾಗ ತಮ್ಮ ಮಕ್ಕಳ ಹಾಗೂ ಮನೆಯ ಸಂಪೂರ್ಣ ಜವಾಬ್ದಾರಿ ಅತ್ತೆ ನೋಡಿಕೊಳ್ಳುತ್ತಾರೆ, ಹಾಗೆಯೆ ಮಕ್ಕಳು ಹಿರಿಯರಿಂದ ಆಚಾರ ವಿಚಾರ ಸಂಪ್ರದಾಯಗಳನ್ನು ಕೂಡ ಕಲಿಯುತ್ತಾರೆ, ಒಂಟಿತನ ಕಾಡುವುದಿಲ್ಲ, ಸಂಬಂಧಗಳ ಮಹತ್ವ ಅರಿವಾಗುತ್ತದೆ, ಇದರಿಂದ ಪುರುಷರಿಗೂ ಕೂಡ ಯಾವುದೇ ತೊಂದರೆಗಳು ಆಗುವುದಿಲ್ಲ. ಇತ್ತೀಚಿಗೆ ನಡೆಯುತ್ತಿರುವ ನೈತಿಕ ಚಟುವಟಿಕೆಗಳು, ಗಂಡ ಹೆಂಡತಿಯ ನಡುವಿನ ಕಲಹಗಳು, ಮಕ್ಕಳ ಅನ್ಯೆತಿಕ ಚಟುವಟಿಕೆಗಳು ಹೆಚ್ಚುತ್ತಿರುವುದಕ್ಕೆ ಎಲ್ಲೋ ಒಂದು ಕಡೆ ಹಿರಿಯರಿಲ್ಲದ ಮನೆಯೂ ಇರಬಹುದು.

ಒಂದು ಎರಡು ಮಕ್ಕಳು ಇರುವ ಮನೆಗಳಲ್ಲಿ ತಂದೆ ತಾಯಿ ಇಬ್ಬರು ಉದ್ಯೋಗದಲ್ಲಿದ್ದಾಗ, ಒಂಟಿತನ, ಹಿರಿಯರು ಹಾಗೂ ಹಿರಿಯರ ಮಾರ್ಗದರ್ಶನ ಇಲ್ಲದ ಮನೆಯಲ್ಲಿ ಯಾರಿಗೂ ಯಾರು ಹೆದರುವುದಿಲ್ಲ, ಗಂಡ ಹೆಂಡತಿ ಹೆಂಡತಿ ಗಂಡನಿಗೆ ಭಯಪಡು ವುದಿಲ್ಲ, ಮಕ್ಕಳು ಕೂಡ ದಾರಿ ತಪ್ಪಿ ಕೌಟುಂಬಿಕ ಕಲಹಗಳು ನಡೆಯುವುದು ಸಾಮಾನ್ಯ.

ದಯವಿಟ್ಟು ತಂದೆ ತಾಯಿಗಳನ್ನು ನಮ್ಮ ಮನೆಯಲ್ಲಿ ಇಟ್ಟುಕೊಳ್ಳ ಬೇಕು, ಅದು ಅವರ ಹಕ್ಕು ಕೂಡ, ಹಿರಿಯರ ಬಗ್ಗೆ ಕಾಳಜಿ ಇರಲಿ. ವಿಶೇಷವಾಗಿ ಭಾರತೀಯರು ನಾವು ಸಂಪ್ರದಾಯದಲ್ಲಿ ವಿಶ್ವಕ್ಕೆ ಮಾದರಿಯಾಗಿದ್ದೇವೆ. ಅಚ್ಚರಿಯ ಸಂಗತಿ ಎಂದರೆ ಭಾರತದಲ್ಲಿ ಕೂಡ ವೃದ್ಧಾಶ್ರಮಗಳು ತಲೆ ಎತ್ತಿ ನಿಲ್ಲುತ್ತಿವೆ... ! ಇದಕ್ಕೆ ನಾವು ಅವಕಾಶ ಮಾಡಿಕೊಡುವುದು ಸಮಂಜಸವಲ್ಲ....... ಮುಂದಿನ ದಿನಗಳಲ್ಲಿ ನಾವು ಕೂಡ ಆ ಸ್ಥಾನದಲ್ಲಿ ಇರುತ್ತೇವೆ....

ನಾವು ನಮ್ಮ ತಂದೆ ತಾಯಿಯೊಂದಿಗೆ ಯಾವ ರೀತಿ ವರ್ತಿಸುತ್ತೇವೆ ಎಂಬುರ ಫಲವೇ ಮಂದಿ ನಮ್ಮ ಜೀವನದಲ್ಲಿ ನಾವು ಅನುಭವಿಸ ಬೇಕಾಗುತ್ತದೆ. ದಯವಿಟ್ಟು ನಮ್ಮ ಮನೆಯಲ್ಲಿ ಹಿರಿಯರು ಇರಲಿ. ಅತ್ತೆ ಸೊಸೆ ಸೂಕ್ಷ್ಮ ಭಾವನೆಗಳನ್ನು ಕೇವಲ ಅತ್ತೆ ಸೊಸೆಗೆ ಅಷ್ಟೇ ಅಲ್ಲ, ಆ ಮನೆಯ ಮಗ, ಮಾವಾ ಕೂಡ ಅರಿಯುವುದು ಮುಖ್ಯ. ತಾನು ಇಬ್ಬರಿಗೂ ಕೊಡುವ ಸಮಯ, ಕಾಳಜಿಯತ್ತ ಗಮನ ಹರಿಸಬೇಕು. ಅವರೊಂದಿಗೆ ಹೆಚ್ಚಿನ ಸಮಯ ಕಳೆಯಿರಿ.

**ಮನೆ ಮತ್ತು ಮನಸ್ಥಿತಿ:** ಮನೆಯ ಪರಿಸರಕ್ಕೆ ತಕ್ಕ ಹಾಗೆ ಕೆಲವೊಮ್ಮೆ ನಮ್ಮ ಮನಸ್ಥಿತಿಯನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಅದರಿಂದ ಕುಟುಂಬ ಅಥವಾ ಸದಸ್ಯರಿಗೆ ಅನುಕೂಲ ಅಂತಾದರೆ ಮನಸ್ಥಿತಿ ಬದಲಿಸಿಕೊಳ್ಳಿ. ಬೇರೆಯವರನ್ನು ದೂಷಿಸುವ ಮುನ್ನ ನಮ್ಮಿಂದ ಆಗಬಹುದಾದ ಬದಲಾವಣೆಯನ್ನು ನಾವು ತಿಳಿಯಬೇಕು.

**ಅತ್ತೆ ಸೊಸೆ ಸಂಬಂಧಿಕರ ಮನೆಗೆ ಜತೆಯಾಗಿ ಹೋಗಿ:** ಮದುವೆ ಮತ್ತು ಇತರೆ ಶುಭ ಸಮಾರಂಭಗಳಲ್ಲಿ ನಿಮ್ಮ ಅತ್ತೆಯನ್ನು ಒಬ್ಬರನ್ನೇ ಕಳುಹಿಸಬೇಡಿ ಅಥವಾ ನೀವು ನಿಮ್ಮ ಪತಿಯೊಂದಿಗೆ ಮಾತ್ರ ಹೋಗಬೇಕು ಎಂದು ಬಯಸಬೇಡಿ.

ನೀವು ಅತ್ತೆಯೊಂದಿಗೆ ಹೋಗಿ ನಿಮ್ಮಿಬ್ಬರ ಒಡನಾಟವನ್ನು ನೆಂಟರಿಷ್ಟರ ಮುಂದೆ ಸಾಬೀತುಪಡಿಸಿ. ಇದು ಕೇವಲ ತೋರಿಕೆ ಯಾಗದೆ ನಿಜವಾಗಿರಲಿ. ಇದರಿಂದ ನಿಮ್ಮ ಮಧ್ಯೆ ಬರಬಹುದಾದ ಅನಗತ್ಯ ಟೀಕೆಗಳು ಮತ್ತು ಸಂಬಂಧಿಕರಿಂದ ಉಂಟಾಗುವ ಮತ್ತು ಎದುರಾಗುವ ಚಾಡಿ ಮಾತನ್ನು ತಪ್ಪಿಸುತ್ತದೆ.

**ಇತರರಿಗೆ ಮಾದರಿಯಾಗಿ:** ಯಾವುದೇ ಕಾರಣಕ್ಕೂ ಅತ್ತೆಯಾಗಲಿ ಸೊಸೆಯಾಗಲಿ, ಚಾಡಿ ಮಾತುಗಳನ್ನು ಹೇಳಲೇಬಾರದು, ಅವರಿಬ್ಬರ ಲ್ಲಿಯೇ ಬಗೆಹರಿಸಬೇಕು.

**ಕಾಳಜಿಯತ್ತ ಗಮನ ಹರಿಸಬೇಕು:** ಅವರೊಂದಿಗೆ ಹೆಚ್ಚಿನ ಸಮಯ ಕಳೆಯಿರಿ. ಕುಟುಂಬ ಸದಸ್ಯರಿಗೆ ಅನುಕೂಲ ಅಂತಾದರೆ ಮನಸ್ಥಿತಿ ಬದಲಿಸಿಕೊಳ್ಳಿ. ಬೇರೆಯವರನ್ನು ದೂಷಿಸುವ ಮುನ್ನ ನಮ್ಮಿಂದ ಆಗಬಹುದಾದ ಬದಲಾವಣೆಯನ್ನು ನಾವು ತಿಳಿಯಬೇಕು.

ಕುಟುಂಬದಲ್ಲಿ ಆತ್ಮೀಯತೆ ಇರಲಿ, ವಿಶೇಷವಾಗಿ ಅತ್ತೆ ಸೊಸೆ ಆತ್ಮೀಯತೆಯಿಂದ ಇರುವ ಕುಟುಂಬ ಸ್ವರ್ಗಕ್ಕೆ ಸಮಾನ...

ನಮ್ಮ ನಿಮ್ಮೆಲ್ಲರ ಮನೆ ಸ್ವರ್ಗದಂತಾಗಲಿ... ನನ್ನನ್ನು ಮಗಳಂತೆ ಕಂಡರೆ, ನಿಮ್ಮನ್ನು ಅಮ್ಮನಂತೆ ನೋಡುವೆ ಎನ್ನುವುದು ಈಗಿನ ಯುವ ಜನತೆಯ ಆಶಯ...... ಅತ್ತೆ ಅಲ್ಲ ಅಮ್ಮ, ಸೊಸೆ ಅಲ್ಲ ಮಗಳು..... ಸುಖಿ ಕುಟುಂಬ ನಮ್ಮ ಕುಟುಂಬ...

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪರಿಶ್ರಮ

ಕಠಿಣ ಪರಿಶ್ರಮದಿ ಸಾಧನೆಯು ಸಾಧ್ಯ
ಜಗದಿ ಯಾವುದು ಇಲ್ಲ ಅಸಾಧ್ಯ
ಮನದಲ್ಲಿದ್ದರೆ ತಾಳ್ಮೆ ಏಕಾಗ್ರತೆ ಛಲ
ಸಿಗುವುದು ಪ್ರಯತ್ನಕ್ಕೆ ತಕ್ಕ ಪ್ರತಿಫಲ

ಪರಿಶ್ರಮ ಪಟ್ಟು ದುಡಿದ ದುಡಿಮೆ
ಹೆಚ್ಚಿಸುವುದು ನಮ್ಮಯ ಗರಿಮೆ
ಆತ್ಮವಿಶ್ವಾಸವು ಮನಸ್ಸಿನ ಹಿರಿಮೆ
ಎಲ್ಲವೂ ಭಗವಂತನ ಮಹಿಮೆ

ಪರಿಶ್ರಮಕೆ ದೊರೆಯುವುದು ಯಶಸ್ಸು
ನೀಡುವುದು ನಮಗೆಂದಿಗೂ ಶ್ರೇಯಸ್ಸು
ಗಮ್ಯದೆಡೆಗೆ ಇರಲಿ ಕಠಿಣ ತಪಸ್ಸು
ಬಾಳೆಂಬ ಯಜ್ಞಕೆ ಸಾಧನಯೇ ಹವಿಸ್ಸು

~ಚೇತನ ಭಾರ್ಗವ, ಅರಮನೆತೋಟ

### ಕನಸಲಿ ತೋರಿದ...



ಗುಡಿಯಾ ನಿನಾದ ಹರಿದು
ಅದುವೇ ಮನದಾಳಕಿಳಿದು
ಮನವಾ ತನ್ನತ್ತ ಸೆಳೆದು
ಭಕುತೀ ಮನದಲ್ಲಿ ಬೆಳೆದು
ಸೆಳೆದೂ ಬೆಳೆದೂ॥ಪ॥

ಗುರಿಯಾ ನಾ ಸೇರುವಂತೆ
ಹರಿಯೇ ತಾ ಹರಸಿದಂತೆ
ಕನಸಲಿ ತೋರಿದ ಶ್ರೀಹರಿ ಚರಣ
ಶ್ರೀಕಾಂತ ಭಗವಂತ
ಮಡಿಲಾ ಹರಿ ನೀಡಿದಂತೆ
ಮಗುವೇ ನಾನಾಗಿ ನಿಂತೆ
ಕಳೆದನು ಮನವನು ಕಾಡುವ ಚಿಂತೆ
ಶ್ರೀಕಾಂತ ಭಗವಂತ

ಕಡಲಾ ಅಲೆಯುಕ್ಕಿ ಬರಲಿ
ಬುವಿಯೆ ಬಾಯ್ತೆರೆದು ಬಿಡಲಿ
ಹರಿಯನು ನೆನೆದರೆ ಉಳಿಯದು ಭಯವು
ಹರಿನಾಮ ಪರಿಣಾಮ
ಸುಳಿಯೇ ಇರಲಲ್ಲಿ ಮುಂದೆ
ಭಯವೂ ನನಗಿಲ್ಲ ತಂದೆ
ಶ್ರೀಹರಿ ದಯದಲಿ ಬುವಿಯಲಿ ಬಾಳ್ವೆ
ಭಯವೇಕೆ ನೋವೇಕೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

EVENTS
News
&
Ads
Call us
94486 33038

### ಪುಟ್ಟಮ್ಮ ನಿಧನ



**ಹೊಸಪೇಟೆ:** ನಗರದ ನೆಹರು ಕಾಲೋನಿ ನಿವಾಸಿ, ವೀರಶೈವ ಲಿಂಗಾಯತ ಸಮಾಜದ ಹಿರಿಯರಾದ ಶ್ರೀಮತಿ ಪುಟ್ಟಮ್ಮ (93) ಅವರು ಬುಧವಾರ ರಾತ್ರಿ ಲಿಂಗೈಕ್ಯರಾದರು.

ಮೃತರಿಗೆ ಪುತ್ರ ಸ್ವತಂತ್ರ ಹೋರಾಟ ದಿನಪತ್ರಿಕೆ ಸಂಪಾದಕ ಎಸ್.ಎಂ.ಮನೋಹರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ. ಮೃತರ ಅಂತ್ಯಕ್ರಿಯೆ ಗುರುವಾರ ನಗರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು.

### ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ರಾಜ್ಯ ಸಚಿವ ಸಂಪುಟದಿಂದ ಪ್ರಮುಖ ನಿರ್ಣಯಗಳು

# ಜವಳಿ ಪಾರ್ಕ್, ಪರಮಾಣು ವಿದ್ಯುತ್ ಸ್ಥಾವರ, ಪ್ರವಾಸೋದ್ಯಮ ಉತ್ತೇಜನಕ್ಕೆ ಒತ್ತು

## ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ ಒಳಗೊಂಡ ಉತ್ತರ ಕರ್ನಾಟಕ ಪ್ರವಾಸಿ ವೃತ್ತ

■ **ಹಂಪಿ ಟೈಮ್ಸ್ ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಹಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಜವಳಿ, ಇಂಧನ, ಕೃಷಿ, ಪ್ರವಾಸೋದ್ಯಮ, ನೀರಾವರಿ, ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹೂಡಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಸಂಪುಟ ಹಸಿರು ನಿಶಾನೆ ತೋರಿದೆ.

**ಪ್ರಮುಖ ಅಭಿವೃದ್ಧಿ ಯೋಜನೆಗಳು**

**ರಾಯಚೂರು ಜವಳಿ ಪಾರ್ಕ್:** ರಾಯಚೂರು ಜಿಲ್ಲೆಯಲ್ಲಿ 24.50 ಕೋಟಿ ರೂ. ವೆಚ್ಚದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ನೂತನ ಜವಳಿ ಪಾರ್ಕ್ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ. ಇದು ಸ್ಥಳೀಯ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗಲಿದೆ.



**ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆ:** ಕರ್ನಾಟಕದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಎನ್‌ಟಿಪಿಸಿ ಸಂಸ್ಥೆಯು ಗುರುತಿಸಿರುವ ಸಂಭಾವ್ಯ ಸ್ಥಳಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲು ಅನುಮತಿ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ.

**ಆಯುಷ್ ಇಲಾಖೆ ವಿಲೀನ:** ಆಯುಷ್ ಇಲಾಖೆಯ ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಅನುಷ್ಠಾನ ವಿಭಾಗ ಹಾಗೂ ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯೊಂದಿಗೆ ವಿಲೀನಗೊಳಿಸಲು ನಿರ್ಧರಿಸಲಾಗಿದೆ.

**ತೋಟಗಾರಿಕೆ ಬೆಳೆಗಳ ಬಹು ಉತ್ಪನ್ನಗಳ ಘಟಕಗಳು:** ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಯಳವಟ್ಟಿ ಗ್ರಾಮದಲ್ಲಿ 28.3 ಎಕರೆ ಪ್ರದೇಶದಲ್ಲಿ 35.07 ಕೋಟಿ ರೂ. ವೆಚ್ಚದಲ್ಲಿ ಮಾವು ಮತ್ತು ಇತರೆ ತೋಟಗಾರಿಕೆ ಬೆಳೆಗಳ ಬಹು ಉತ್ಪನ್ನಗಳ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ ಮತ್ತು ಸಂರಕ್ಷಣಾ ಘಟಕವನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲು ಅನುಮೋದನೆ ದೊರೆತಿದೆ.

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸಿರಿವಾರ ಗ್ರಾಮದ 194.33 ಎಕರೆ ಜಮೀನಿನಲ್ಲಿ 83.79 ಕೋಟಿ ರೂ. ಅಂದಾಜು ವೆಚ್ಚದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಅನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗುವುದು.

**ಶೈಕ್ಷಣಿಕ ಮತ್ತು ಸಾಮಾಜಿಕ ಯೋಜನೆಗಳು:** ಚಿಕ್ಕಬಳ್ಳಾಪುರ ಜಿಲ್ಲೆಯ ಯರಮಾರೇನಹಳ್ಳಿ ಗ್ರಾಮದಲ್ಲಿ 5.23 ಎಕರೆ ಸರ್ಕಾರಿ ಜಮೀನನ್ನು ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಇಸ್ಕಾನ್, ಬೆಂಗಳೂರಿಗೆ ಮಂಜೂರು ಮಾಡಲು ನಿರ್ಧರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ 17.09 ಕೋಟಿ ರೂ. ವೆಚ್ಚದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರಿಗಾಗಿ 400 ವಿದ್ಯಾರ್ಥಿನಿಯರ ಸಾಮರ್ಥ್ಯದ ವಸತಿ ಸಹಿತ ಪದವಿ ಪೂರ್ವ ಕಾಲೇಜನ್ನು ನಿರ್ಮಿಸಲು ಒಪ್ಪಿಗೆ ನೀಡಲಾಗಿದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ 10.00 ಕೋಟಿ ರೂ. ಅಂದಾಜು ಮೊತ್ತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನ ಪೀಠವನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ ಕಾಲೇಜುಗಳ 4 ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ 64.00 ಕೋಟಿ ರೂ. ಅಂದಾಜು ಮೊತ್ತದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಮೂಲಸೌಕರ್ಯ ಮತ್ತು ಆಡಳಿತಾತ್ಮಕ ಸುಧಾರಣೆಗಳು**

**ಕಾಂಗ್ರೆಸ್ ಕಚೇರಿ ನಿರ್ಮಾಣ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ವೀರಭದ್ರನ ಪಾಳ್ಯ ಗ್ರಾಮದಲ್ಲಿ 15 ಗುಂಟೆ ಖರಾಬು ಜಮೀನನ್ನು ಕಾಂಗ್ರೆಸ್ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಗುತ್ತಿಗೆ ನೀಡಲು ನಿರ್ಧರಿಸಲಾಗಿದೆ.

ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಳೆ ಮಾಪನ ಕೇಂದ್ರಗಳು: ಸಮರ್ಪಕವಾಗಿ ಕಾರ್ಯನಿರ್ವಹಿಸದ 1,530 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳನ್ನು 19.89 ಕೋಟಿ ರೂ. ವೆಚ್ಚದಲ್ಲಿ ಬದಲಿಸಿ ಹೊಸದಾಗಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

**ಖಾತಾ ನಿಯಂತ್ರಣ:** ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ "ಎ" ಮತ್ತು "ಬಿ" ಖಾತಾ ನೀಡುವುದನ್ನು ನಿಯಂತ್ರಿಸಲು ಸಂಪುಟ ನಿರ್ಣಯ ಕೈಗೊಂಡಿದೆ.

**ನೀರಾವರಿ ಯೋಜನೆಗಳು:** ಮಲಪ್ರಭಾ ನದಿಗೆ ಅಡ್ಡಲಾಗಿರುವ ಮುನವಳ್ಳಿ ಆರ್‌ಬಿಸಿಗೆ ನವಿಲುತೀರ್ಥ ಆಣೆಕಟ್ಟಿನಿಂದ ಚೈನೇಜ್ 0+098 ರಿಂದ ಚೈನೇಜ್ 0+433 ವರೆಗೆ 19.05 ಕೋಟಿ ರೂ. ವೆಚ್ಚದಲ್ಲಿ ಅಕ್ವಾಡಕ್ಟ್ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.

ಹೇಮಾವತಿ ಯೋಜನೆಯಡಿಯಲ್ಲಿನ ನಾಗಮಂಗಲ ಶಾಖಾ ನಾಲೆಯ ಸರಪಳಿ 0.00 ಕಿ.ಮೀ ನಿಂದ 78.46 ಕಿ.ಮೀ ವರೆಗೆ 560.00 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ.

ಬೆಂಗಳೂರು ನಗರದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೋಲಾರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಒಟ್ಟು 126 ಕೆರೆಗಳಿಗೆ ತುಂಬಿಸುವ ಏತ ನೀರಾವರಿ ಯೋಜನೆಯ 5 ವರ್ಷಗಳ ಪೋಷಣೆ ಮತ್ತು ನಿರ್ವಹಣೆ (O&M) ಕಾಮಗಾರಿಯನ್ನು 128.00 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ.

**ಅಂತರ್ಜಲ ಬಳಕೆ:** ಕೇಂದ್ರ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲು ಸಂಪುಟ ಒಪ್ಪಿಗೆ ನೀಡಿದೆ.



**ರಸ್ತೆ ಅಗಲೀಕರಣ:** ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ಪಟ್ಟಣದ ರಸ್ತೆಯನ್ನು 60.00 ಕೋಟಿ ರೂ. ಅಂದಾಜು ಮೊತ್ತದಲ್ಲಿ ಅಗಲೀಕರಣ ಮಾಡುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ.

**ತಾಲ್ಲೂಕು ಪ್ರಜಾಸೌಧ:** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ 16.00 ಕೋಟಿ ರೂ. ಅಂದಾಜು ಮೊತ್ತದಲ್ಲಿ ತಾಲ್ಲೂಕು ಪ್ರಜಾಸೌಧ ಕಟ್ಟಡ ಕಾಮಗಾರಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.

**ಭೂಸ್ವಾಧೀನ ಹಿಂಪಡೆಯಲು ಕ್ರಮ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು ಕಾನೂನುಬಾಹಿರವಾಗಿ ಕೈಬಿಟ್ಟಿರುವ 29 ಪ್ರಕರಣಗಳಲ್ಲಿ, ಸಂಬಂಧಪಟ್ಟವರಿಗೆ ನೋಟೀಸ್ ನೀಡಿ ವಿವರಣೆ ಪಡೆದು, ಅಧಿಸೂಚನೆಗಳನ್ನು ಹಿಂಪಡೆಯಲು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

**ಕಮಾನು ಸೇತುವೆ ನಿರ್ಮಾಣ:** ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಕೊಡಗು ಜಿಲ್ಲೆಯ ಕುಶಾಲನಗರದ ಹುಲುಗುಂದ ಗ್ರಾಮದ ಬಳಿ 36.50 ಕೋಟಿ ರೂ. ವೆಚ್ಚದಲ್ಲಿ ಕಮಾನು ಸೇತುವೆ ನಿರ್ಮಿಸಲು ಸಂಪುಟ ನಿರ್ಣಯಿಸಿದೆ.

**ಪ್ರವಾಸೋದ್ಯಮ ಉತ್ತೇಜನ ಮತ್ತು ಆರ್‌ಸಿಬಿ ಗಲಭೆ ವರದಿ**

**ಉತ್ತರ ಕರ್ನಾಟಕ ಪ್ರವಾಸಿ ವೃತ್ತ:** ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ ಒಳಗೊಂಡ ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು 166.22 ಕೋಟಿ ರೂ. ಅಂದಾಜು ಮೊತ್ತದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಆಃಈಔಖಿ ಮಾದರಿ) ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದ ಮೂಲಕ ಅಭಿವೃದ್ಧಿಪಡಿಸಲು ಸಂಪುಟ ಒಪ್ಪಿಗೆ ನೀಡಿದೆ.

**ಕಿತ್ತೂರು ಥೀಮ್ ಪಾರ್ಕ್:** ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಕಿತ್ತೂರು ಕೋಟೆ ಆವರಣದಲ್ಲಿ 30.00 ಕೋಟಿ ರೂ. ವೆಚ್ಚದ ಥೀಮ್ ಪಾರ್ಕ್ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆರ್‌ಸಿಬಿ ಕ್ರಿಕೆಟ್ ತಂಡದ ವಿಜಯೋತ್ಸವ ಗಲಭೆ ವರದಿ: 2025ರ ಜೂನ್ 4ರಂದು ಆರ್‌ಸಿಬಿ ಕ್ರಿಕೆಟ್ ತಂಡದ ವಿಜಯೋತ್ಸವ ಸಮಾರಂಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉಂಟಾದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಜಾನ್ ಮೈಕಲ್ ಕುನ್ಹಾ ಅವರ ನೇತೃತ್ವದ ಏಕ ಸದಸ್ಯ ವಿಚಾರಣಾ ಆಯೋಗದ ವರದಿಯನ್ನು ಸ್ವೀಕರಿಸಲಾಗಿದೆ. ವರದಿಯನ್ನು ಅಧ್ಯಯನ ಮಾಡಿದ ನಂತರ ಮುಂದಿನ ಸಚಿವ ಸಂಪುಟದಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲು ಸಂಪುಟ ನಿರ್ಧರಿಸಿದೆ.

# ನಮ್ಮ ಸರ್ಕಾರ ಸದಾ ಕನ್ನಡದ ಸಾಹಿತ್ಯ, ಸಂಸ್ಕೃತಿಯ ಪರವಾಗಿ ಕೆಲಸ ಮಾಡುತ್ತದೆ: ಸಿ.ಎಂ



■ **ಹಂಪಿ ಟೈಮ್ಸ್ ಬೆಂಗಳೂರು**

ನಮ್ಮ ಸರ್ಕಾರ ಸದಾ ಕನ್ನಡದ ಸಾಹಿತ್ಯ, ಸಂಸ್ಕೃತಿಯ ಪರವಾಗಿ ಕೆಲಸ ಮಾಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2024–25ನೇ ಸಾಲಿನ ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳನ್ನು ವಿತರಿಸಿ, ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಮಾತನಾಡಿದರು. ಪ್ರಶಸ್ತಿಗಳನ್ನು ನಿರೀಕ್ಷಿಸದೇ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡುವ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತಿದೆ. ಇದರ ಅಂಗವಾಗಿ 18 ಮಂದಿ ಸಾಧಕರಿಗೆ ಪ್ರಶಸ್ತಿ ನೀಡಿದ್ದೇವೆ. ಇದರಲ್ಲಿ ಮೂರು ಪ್ರಶಸ್ತಿಗೆ 10 ಲಕ್ಷ ರೂಪಾಯಿ ನೀಡಲಾಗುತ್ತಿದೆ, ಉಳಿದ ಪ್ರಶಸ್ತಿಗಳಿಗೆ 5 ಲಕ್ಷ ರೂಪಾಯಿ ನೀಡಲಾಗುತ್ತಿದೆ. ಆದರೆ, ಪುರಸ್ಕೃತರ ಸಾಧನೆಗೆ ಈ ಹಣ ಸಮವಲ್ಲ. ಆದರೆ, ಇದು ಕನ್ನಡ ಸಂಸ್ಕೃತಿಯ ಕೆಲಸಕ್ಕೆ ಕೊಡುವ ಗೌರವ ಎಂದರು.

ಬಹಳ ಮಂದಿ ಸಂಸ್ಕೃತಿ ವಿಚಾರದಲ್ಲಿ ಸಾಧನೆ ಮಾಡುತ್ತಲೇ ಇರುತ್ತಾರೆ. 2000 ವರ್ಷಗಳ ಇತಿಹಾಸ ಇರುವ ಕನ್ನಡದ ಸಾಂಸ್ಕೃತಿಕ ಸಂಪತ್ತು ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ಕನ್ನಡ ಸಂಸ್ಕೃತಿ, ಸಾಹಿತ್ಯದ ಕೆಲಸದಲ್ಲಿ ನಮ್ಮ ಸರ್ಕಾರ ಹಿಂದೆ ಬೀಳುವುದಿಲ್ಲ. ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡುವ ಕೆಲಸವನ್ನು ನಾವು ಮಾಡುತ್ತೇವೆ ಎಂದರು.

ರಾಜ್ಯದ ಮೊದಲ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾಗಿದ್ದವನು ನಾನು. ನಾನು ಸಾಹಿತ್ಯದ ವಿದ್ಯಾರ್ಥಿ ಅಲ್ಲ. ಆದರೆ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಅಪಾರವಾಗಿ ಪ್ರೀತಿಸುವವನು. ಕನ್ನಡ ಕರ್ನಾಟಕದಲ್ಲಿ ಸಾರ್ವಭೌಮ ಭಾಷೆ ಆಗಬೇಕು ಎನ್ನುವ ದಿಕ್ಕಿನಲ್ಲಿ ಬೇಷರತ್ ಬದ್ಧತೆ ಇಟ್ಟುಕೊಂಡು ನಾನು ಕಾವಲು ಸಮಿತಿಯ ಮೊದಲ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ ಎಂದರು.



- Admissions
- Requirements
- Firm Branding
- Public Notice
- Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper
BOOK NOW! Scan to Read

- Obituary
- Remembrance
- Birthday wish ads
- Events Display &
- Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038


## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

**18–07–2025 – ಶುಕ್ರವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ಸುಕರ್ಮ |
| ಕರಣ | : ಧೃತಿ |
| ಸೂರ್ಯೋದಯ | : 05:52:43 |
| ಸೂರ್ಯಾಸ್ತ | : 19:13:31 |
| ರಾಹು ಕಾಲ | : 10:53–12:33 |
| ಯಮಘಂಡ ಕಾಲ | : 15:33–17:33 |
| ಗುಳಿಕ ಕಾಲ | : 07:33–09:13 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 17–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.06 ಅಡಿ |
| ಒಳ ಹರಿವು | 38779 ಕ್ಯುಸೆಕ್ |
| ಹೊರ ಹರಿವು | 38523 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 80.003 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1611.07 ಅಡಿ |
| ಒಳ ಹರಿವು | 49522 ಕ್ಯುಸೆಕ್ |
| ಹೊರ ಹರಿವು | 212 ಕ್ಯುಸೆಕ್ |
| ಸಾಮರ್ಥ್ಯ | 39.718 ಟಿಎಂಸಿ |

# ತೋಟಗಾರಿಕೆ ಬೆಳೆ ವೀಕ್ಷಿಸಿ ರೈತರೊಂದಿಗೆ ಚರ್ಚಿಸಿದ ಡಿಸಿ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಅವರು ಗುರುವಾರ ಕೊಪ್ಪಳ ಜಿಲ್ಲೆಯ ವಿವಿಧ ಗ್ರಾಮಗಳ ಹಣ್ಣು ಬೆಳೆಗಳ ಸಂಸ್ಕರಣ ಘಟಕಗಳು, ಕೃಷಿ ಹೊಂಡ ಮತ್ತು ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳ ವೀಕ್ಷಣೆ ಮಾಡಿ ರೈತರೊಂದಿಗೆ ಚರ್ಚಿಸಿದರು.

ಕೊಪ್ಪಳ ತಾಲ್ಲೂಕಿನ ಮೆತಗಲ್ ಗ್ರಾಮದಲ್ಲಿ ನಬಾರ್ಡ ವತಿಯಿಂದ ನಿರ್ಮಿಸುತ್ತಿರುವ ಹಣ್ಣು ಬೆಳೆಗಳ ಸಂಸ್ಕರಣ ಘಟಕಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ನಂತರ ಯಲಬುರ್ಗಾ ತಾಲ್ಲೂಕಿನ ಮಾಟಲದಿನ್ನಿ ಗ್ರಾಮದ ರೈತರ ಕೃಷಿ ಭಾಗ್ಯ ಯೋಜನೆ, ಉದ್ಯೋಗ ಖಾತ್ರಿ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೃಷಿ ಹೊಂಡ ಮತ್ತು ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳ ವೀಕ್ಷಣೆ ಮಾಡಿದರು. ಅಂತರಾಷ್ಟ್ರೀಯ ಸಾವಯವ ಕೃಷಿಕ ಬಸಯ್ಯ ಹಿರೇಮಠ ಅವರ ನುಗ್ಗೆಕಾಯಿ ಸಂಸ್ಕರಣ ಘಟಕಕ್ಕೂ ಭೇಟಿ ನೀಡಿದರು. ನಂತರ ಕುಷ್ಟಗಿ ತಾಲ್ಲೂಕಿನ ಬ್ಯಾಲಿಹಾಳ ಗ್ರಾಮದ ನೈಸರ್ಗಿಕ ಕೃಷಿಕ ಡಾ.ದೇವಿಂದ್ರ ಬಳ್ಳುಟಗಿ ಅವರ ತೋಟಕ್ಕೆ ಭೇಟಿ ನೀಡಿ, ಕೃಷಿ ಸಂಬಂಧಿಸಿದ ವಿಷಯಗಳ ಕುರಿತು ರೈತರೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್., ಉಪನಿರ್ದೇಶಕ ಸಿದ್ದೇಶ್ವರ ಎಲ್., ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಡಾ. ಶ್ರೀನಿವಾಸ ಕುಲಕರ್ಣಿ, ಕೊಪ್ಪಳ ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷರಾದ ವೀರಣ್ಣ ಕಮತರ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಕೃಷ್ಣ ಉಕ್ಕುಂದ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಡಾ. ರವಿ ಸೇರಿದಂತೆ ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಹೈಸ್ಕೂಲ್ ಪಿಯು ಕಾಲೇಜ್‌ಗಳಲ್ಲಿ ಜಾಗೃತಿ ಮೂಡಿಸಿ

**ಮೊದಲ ಪುಟದಿಂದ**

ಇಲಾಖೆಯ ಪೋಷಣ್ ಅಭಿಯಾನ ಯೋಜನೆಯಿದ್ದು, ಫಲಾನುಭವಿಗಳನ್ನು ಗುರುತಿಸಿ ಪೋಷಣ್ ಟ್ರ್ಯಾಕರ್ ತಂತ್ರಾಂಶದಲ್ಲಿ ಆಧಾರ್ ಸೀಡಿಂಗ್ ಮಾಹಿತಿಯನ್ನು ತಪ್ಪಿಲ್ಲದಂತೆ ನಮೂದಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅನಾಥ, ನಿರ್ಗತಿಕ, ಪೊಲೀಸ್‌ರಿಂದ ಅಭಿರಕ್ಷಣೆ ಗಾಗಿ ದಾಖಲಾದ ಮಹಿಳೆಯರು ಆಶ್ರಯ ಪಡೆಯಲು ಜಿಲ್ಲೆಯಲ್ಲಿ ಬಳ್ಳಾರಿಯಲ್ಲಿ ರಾಜ್ಯ ಮಹಿಳಾ ನಿಲಯವಿದ್ದು, ಅವರ ಆರೈಕೆಗಾಗಿ ಸಿಬ್ಬಂದಿಗಳ ಕೊರತೆಯಿದ್ದಲ್ಲಿ ಸಂಬಂಧಿಸಿದ ವಿಭಾಗದ ಅಧಿಕಾರಿಗಳಿಗೆ ಪತ್ರ ಬರೆಯಬೇಕು ಎಂದು ಸಂಸ್ಥೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕುಟುಂಬಗಳಲ್ಲಿ ಯಾವುದೇ ಬಗೆಯ ಸಮಸ್ಯೆಗಳಲ್ಲಿ ಹಿಂಸೆಗೊಳಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ದೌಜನ್ಯಕ್ಕೊಳಗಾದ ಮಹಿಳೆಯರನ್ನು ರಕ್ಷಿಸಲು ಜಿಲ್ಲಾ ಮಟ್ಟದಲ್ಲಿ ಸಂರಕ್ಷಣಾಧಿಕಾರಿಯನ್ನು ನೇಮಿಸಲಾಗಿದ್ದು, ಮಹಿಳೆಯರ ಉಚಿತ ಸಹಾಯವಾಣಿ ಸಂಖ್ಯೆ 181 ನ್ನು ಗ್ರಾಮಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ ಹೆಚ್ಚಾಗಿ ಪ್ರಚಾರ ನೀಡಬೇಕು ಎಂದರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ದೌರ್ಜನ್ಯ, ಮಹಿಳೆ ಯರ ಮತ್ತು ಮಕ್ಕಳ ಸಾಗಾಟ, ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ ಸೇರಿದಂತೆ ವಿವಿಧ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಸಖಿ ಒನ್ ಸ್ಟಾಪ್ ಸೆಂಟರ್, ಬಾಲಕಿಯರ ವಸತಿ ನಿಲಯ, ದಮನಿತ ಮಹಿಳೆಯರ/ ಟ್ರಾನ್ಸ್ ಜೆಂಡರ್ಸ್, ಸಾಂತ್ವನ ಕೇಂದ್ರಗಳು ಸೇರಿದಂತೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಜರುಗಿತು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಡಿಎಸ್ಪಿ ಚಂದ್ರಕಾಂತ ನಂದಾರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ, ಎಲ್ಲಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು, ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಜರಿದ್ದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಪ್ರಗತಿಗಾಗಿ
ಈ ಬಾರಿ ಫಲಿತಾಂಶ ನಮ್ಮದೆ
ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
ನಿಮ್ಮೂರಲ್ಲೇ... ಸಂಜೆ ಸಾಮೂಹಿಕ ಓದು
ಶಾಲೆಗೊಂದು 625 ಅಭಿಯಾನಕ್ಕೆ ಕೈಜೋಡಿಸಿ
ವಾರ್ಡ್, ಗ್ರಾಮ ವ್ಯಾಪ್ತಿಯ ಸಮಾಜ ಸೇವಕರು, ಶಿಕ್ಷಣ ಪ್ರೇಮಿಗಳು, ಜನಪ್ರತಿನಿಧಿಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡಿ, ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ
SCAN to READ HAMPI TIMES E-PAPER
ನಿಮ್ಮ ಸಹಕಾರದ ನಿರೀಕ್ಷೆಯಲ್ಲಿ...
ಹಂಪಿ ಟೈಮ್ಸ್ ಬಳಗ, ವಿಜಯನಗರ
94486 33038


## SSLC ಹಂಪಿ ಟೈಮ್ಸ್ ಮಾರ್ಗದರ್ಶಿ

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸ ಮಾಡಿ

**ಈ ಬಾರಿ ಫಲಿತಾಂಶ ನಮ್ಮದೆ**
**ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ**

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

Hampi Times Margadarshi 2025-26

### ಅಧ್ಯಾಯ 3. ಜೀವಕ್ರಿಯೆಗಳು

**1. ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಗತ್ಯವಾದ ಅಂಶಗಳು ಯಾವುವು?ಈ ಪ್ರಕ್ರಿಯೆಯಲ್ಲಿ ಜರಗುವ ಘಟನೆಗಳನ್ನು ತಿಳಿಸಿ. ಈ ಪ್ರಕ್ರಿಯೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣದ ಮೂಲಕ ವ್ಯಕ್ತಪಡಿಸಿ.**

ಉತ್ತರ : ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಅಗತ್ಯವಾದ ಅಂಶಗಳು :

* ಸೂರ್ಯನ ಬೆಳಕು * ಕಾರ್ಬನ್ ಡೈ ಆಕ್ಸೈಡ್ * ಪತ್ರಹರಿತ್ತು * ನೀರು

ಈ ಪ್ರಕ್ರಿಯೆಯಲ್ಲಿ ಜರಗುವ ಘಟನೆಗಳು :

(i) ಕ್ಲೋರೋಫಿಲ್‌ನಿಂದ ಬೆಳಕಿನ ಶಕ್ತಿ ಹೀರುವಿಕೆ.

(ii) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿಜನ್ ಆಗಿ ವಿಭಜಿಸಲ್ಪಡುವುದು.

(iii) ಕಾರ್ಬನ್ ಡೈಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು.

ಈ ಪ್ರಕ್ರಿಯೆಯ ಸರಿದೂಗಿಸಿದ ರಾಸಾಯನಿಕ ಸಮೀಕರಣ:

$$6CO_2 + 12H_2O \xrightarrow[\text{ಸೌರಬೆಳಕು}]{\text{ಕ್ಲೋರೋಫಿಲ್}} \underset{\text{(ಗ್ಲುಕೋಸ್)}}{C_6H_{12}O_6} + 6O_2 + 6H_2O$$

**2. ಮಾನವನ ಜೀರ್ಣಕ್ರಿಯೆಯಲ್ಲಿ ಈ ಕೆಳಗಿನ ಅಂಗಗಳ ಕಾರ್ಯವೇನು ?**

ಉತ್ತರ : 1). ಜಠರ : • ಜಠರದ ಗೋಡೆಯಲ್ಲಿರುವ ಜಠರ ಗ್ರಂಥಿಗಳು ಹೈಡ್ರೋಕ್ಲೋರಿಕ್ ಆಮ್ಲ, ಪೆಪ್ಸಿನ್ ಮತ್ತು ಲೋಳೆಯನ್ನು ಸ್ರವಿಸುತ್ತವೆ.

• ಹೈಡ್ರೋಕ್ಲೋರಿಕ್ ಆಮ್ಲವು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸುವ ಆಮ್ಲೀಯ ಮಾಧ್ಯಮವನ್ನು ಉಂಟುಮಾಡುತ್ತದೆ.

• ಪೆಪ್ಸಿನ್ ಪ್ರೋಟೀನ್ ಅನ್ನು ಜೀರ್ಣಿಸುತ್ತದೆ.

2). ಯಕೃತ್ : • ಇದು ಪಿತ್ತರಸವನ್ನು ಉತ್ಪತ್ತಿ ಮಾಡುತ್ತದೆ.

• ಪಿತ್ತರಸವು ಆಹಾರವನ್ನು ಕ್ಷಾರೀಯಗೊಳಿಸುತ್ತದೆ.

• ಪಿತ್ತರಸದ ಲವಣಗಳು ಕೊಬ್ಬನ್ನು ಎಮಲ್ಸೀಕರಣಗೊಳಿಸುತ್ತವೆ.

3). ಸಣ್ಣ ಕರುಳು : • ಸಣ್ಣ ಕರುಳಿನಲ್ಲಿ ಆಹಾರದಲ್ಲಿನ ಪ್ರೋಟೀನ್, ಕಾರ್ಬೋಹೈಡ್ರೇಟ್ ಹಾಗೂ ಕೊಬ್ಬುಗಳು ಸಂಪೂರ್ಣ ಪಚನಗೊಳ್ಳುತ್ತವೆ.

• ಕರುಳ ರಸದಲ್ಲಿನ ಕಿಣ್ವಗಳು ಪ್ರೋಟೀನ್‌ಗಳನ್ನು – ಅಮೈನೋ ಆಮ್ಲಗಳಾಗಿ, ಕೊಬ್ಬನ್ನು – ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್‌ಗಳಾಗಿ ಹಾಗೂ ಸಂಕೀರ್ಣ ಕಾರ್ಬೋಹೈಡ್ರೋಟ್‌ಗಳನ್ನು ಗ್ಲುಕೋಸ್ ಆಗಿ ಪರಿವರ್ತಿಸುತ್ತವೆ.

• ಸಣ್ಣ ಕರುಳಿನ ಒಳಗೋಡೆಯಲ್ಲಿನ ವಿಲ್ಲೈಗಳು ಪಚನವಾದ ಆಹಾರವನ್ನು ಹೀರಿಕೊಳ್ಳುತ್ತವೆ.

4). ವಿಲ್ಲೈಗಳು : • ಸಣ್ಣ ಕರುಳಿನ ಒಳಗೋಡೆಯಲ್ಲಿನ ಬೆರಳಿನಾಕಾರದ ರಚನೆಗಳೇ ವಿಲ್ಲೈಗಳು. ಇವು ಪಚನವಾದ ಆಹಾರದಲ್ಲಿನ ಪೋಷಕಾಂಶಗಳನ್ನು ಹೀರಿಕೊಂಡು ರಕ್ತಕ್ಕೆ ಸೇರಿಸುತ್ತದೆ.

**3. ಮಾನವನ ಜೀರ್ಣಕ್ರಿಯೆಯಲ್ಲಿ ಈ ಕೆಳಗಿನ ಕಿಣ್ವಗಳ ಕಾರ್ಯವೇನು ?**

**a] ಟ್ರಿಪ್ಸಿನ್ b] ಲಿಪೇಸ್ c] ಪೆಪ್ಸಿನ್ d] ಅಮೈಲೇಸ್**

ಉತ್ತರ :a] ಟ್ರಿಪ್ಸಿನ್ – ಪ್ರೋಟೀನ್ ಅನ್ನು ಜೀರ್ಣಿಸುತ್ತದೆ.

b] ಲೈಪೇಸ್ – ಎಮಲ್ಸಿಕರಣಗೊಂಡ ಕೊಬ್ಬನ್ನು ವಿಭಜಿಸುತ್ತದೆ.

c] ಪೆಪ್ಸಿನ್ – ಪ್ರೋಟೀನ್‌ಗಳನ್ನು ಪೆಪ್ಟೈಡ್‌ಗಳಾಗಿ ಪರಿವರ್ತಿಸುತ್ತದೆ

d] ಅಮೈಲೇಸ್ – ಪಿಷ್ಟವನ್ನು ಸಕ್ಕರೆಯನ್ನಾಗಿ ಪರಿವರ್ತಿಸುತ್ತದೆ.

**4. ವಾಯುವಿಕ ಮತ್ತು ಅವಾಯುವಿಕ ಉಸಿರಾಟಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.**

| ವಾಯುವಿಕ ಉಸಿರಾಟ | ಅವಾಯುವಿಕ ಉಸಿರಾಟ |
|---|---|
| ಆಕ್ಸಿಜನ್ ಉಪಸ್ಥಿತಿಯಲ್ಲಿ ಜರಗುತ್ತದೆ. | ಆಕ್ಸಿಜನ್ ಅನುಪಸ್ಥಿತಿಯಲ್ಲಿ ಜರಗುತ್ತದೆ. |
| ಮೈಟೋಕಾಂಡ್ರಿಯಾದಲ್ಲಿ ಜರಗುತ್ತದೆ. | ಯೀಸ್ಟ್‌ಕೋಶಗಳಲ್ಲಿ ಜರಗುತ್ತದೆ. |
| ಹೆಚ್ಚು ಶಕ್ತಿ ಬಿಡುಗಡೆಯಾಗುತ್ತದೆ. | ಕಡಿಮೆ ಶಕ್ತಿ ಬಿಡುಗಡೆಯಾಗುತ್ತದೆ. |
| ಅಂತಿಮ ಉತ್ಪನ್ನಗಳು : ಕಾರ್ಬನ್ ಡೈ ಆಕ್ಸೈಡ್ , ನೀರು | ಅಂತಿಮ ಉತ್ಪನ್ನಗಳು : ಕಾರ್ಬನ್ ಡೈ ಆಕ್ಸೈಡ್ , ಎಥನಾಲ್. |

**5. ಮಾನವನಲ್ಲಿ 4 ಕೋಣೆಗಳ ಹೃದಯದ ಮಹತ್ವವೇನು ?**

ಉತ್ತರ : * ಆಕ್ಸಿಜನ್ ಯುಕ್ತ ಮತ್ತು ಆಕ್ಸಿಜನ್ ರಿಕ್ತ ರಕ್ತವು ಪ್ರತ್ಯೇಕವಾಗಿ ಸಾಗಾಣಿಕೆ ಆಗಲು ಸಹಾಯಕ.

* ದೇಹಕ್ಕೆ ಗರಿಷ್ಟ ಪ್ರಮಾಣದ ಆಕ್ಸಿಜನ್ ಒದಗಿಸುತ್ತದೆ.
* ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.
* ಅಧಿಕ ಶಕ್ತಿಯ ಅವಶ್ಯಕತೆಯನ್ನು ಪೂರೈಸುತ್ತದೆ.

**6. ಇಮ್ಮಡಿ ಪರಿಚಲನೆ ಎಂದರೇನು ? ಜೀವಿಗಳಲ್ಲಿ ಇದರ ಮಹತ್ವವೇನು ?**

ಉತ್ತರ : ರಕ್ತವು ಒಂದು ಸಂಪೂರ್ಣ ಪರಿಚಲನೆಯಲ್ಲಿ ಎರಡು ಬಾರಿ ಹೃದಯವನ್ನು ಪ್ರವೇಶಿಸುವುದರಿಂದ ಇದನ್ನು ಇಮ್ಮಡಿ ಪರಿಚಲನೆ ಎನ್ನುವರು.

* ಇಮ್ಮಡಿ ಪರಿಚಲನೆಯು ದೇಹದ ಎಲ್ಲಾ ಭಾಗಗಳಿಗೆ ಸಾಕಷ್ಟು ಆಕ್ಸಿಜನ್ ಯುಕ್ತ ರಕ್ತವನ್ನು ಶೀಘ್ರವಾಗಿ ತಲುಪಲು ಸಹಕರಿಸುತ್ತದೆ.

* ಇದರಿಂದ ಜೀವಿಗಳು ತಮ್ಮ ಅಧಿಕ ಶಕ್ತಿ ಅಗತ್ಯವನ್ನು ಪೂರೈಸಿಕೊಳ್ಳಬಹುದು.

* ಸ್ತನಿಗಳಲ್ಲಿ ಮತ್ತು ಪಕ್ಷಿಗಳಲ್ಲಿ ಇಮ್ಮಡಿ ಪರಿಚಲನೆಯು ದೇಹದ ಉಷ್ಣತೆಯನ್ನು ನಿಯಂತ್ರಿಸಲು ಸಹಕಾರಿಯಾಗಿದೆ.

**7. ಅಪಧಮನಿಗಳು , ಅಭಿಧಮನಿಗಳ ನಡುವಿನ ವ್ಯತ್ಯಾಸ ತಿಳಿಸಿ**

| ಅಪಧಮನಿಗಳು | ಅಭಿಧಮನಿಗಳು |
|---|---|
| ರಕ್ತವನ್ನು ಹೃದಯದಿಂದ ದೇಹದ ವಿವಿಧ ಅಂಗಗಳಿಗೆ ರಕ್ತವನ್ನು ಕೊಂಡೊಯ್ಯುತ್ತವೆ. | ವಿವಿಧ ಅಂಗಗಳಿಂದ ರಕ್ತವನ್ನು ಸಂಗ್ರಹಿಸಿ ಹೃದಯಕ್ಕೆ ಮರಳಿ ತರುತ್ತವೆ. |
| ರಕ್ತವು ಹೃದಯದಿಂದ ಅತಿಹೆಚ್ಚಿನ ಒತ್ತಡದಲ್ಲಿ ಹೊರ ಹೊಮ್ಮುವುದರಿಂದ ಅಪಧಮನಿಗಳು ದಪ್ಪವಾದ, ಸ್ಥಿತಿಸ್ಥಾಪಕ ಭಿತ್ತಿಯನ್ನು ಹೊಂದಿವೆ. | ರಕ್ತವು ದೀರ್ಘಕಾಲದವರೆಗೆ ಒತ್ತಡದಲ್ಲಿ ಇರುವುದಿಲ್ಲ ಆದ್ದರಿಂದ ಅವುಗಳಿಗೆ ದಪ್ಪವಾದ ಭಿತ್ತಿಯ ಅಗತ್ಯವಿಲ್ಲ |
| ಇವು ಕವಾಟಗಳನ್ನು ಹೊಂದಿಲ್ಲ | ಇವು ಕವಾಟಗಳನ್ನು ಹೊಂದಿದ್ದು ರಕ್ತವು ಕೇವಲ ಒಂದು ದಿಕ್ಕಿನಲ್ಲಿ ಹರಿಯಲು ಬಿಡುತ್ತವೆ. |

**8. ಸಸ್ಯಗಳ ತ್ಯಾಜ್ಯ ಪದಾರ್ಥಗಳನ್ನು ಹೊರ ಹಾಕಲು ಬಳಸುವ ವಿಧಾನಗಳು ಯಾವುವು ?**

ಉತ್ತರ : • ಎಲೆಗಳ ಉದುರುವಿಕೆಯಿಂದ,

• ಹಳೆಯ ಕ್ಸೈಲಂಗಳಲ್ಲಿ ರಾಳ & ಅಂಟುಗಳ ರೂಪದಲ್ಲಿ,

• ತೊಗಟೆಯನ್ನು ಕಳಚಿಕೊಳ್ಳುವುದರ ಮೂಲಕ,

• ತಮ್ಮ ಸುತ್ತಲಿನ ಮಣ್ಣಿನಲ್ಲಿ ತ್ಯಾಜ್ಯವಸ್ತುಗಳು ವಿಸರ್ಜಿಸುತ್ತವೆ.

**9. ನೆಫ್ರಾನ್‌ಗಳಲ್ಲಿ ಮೂತ್ರ ಉತ್ಪತ್ತಿಯಾಗುವ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ : ಗ್ಲಾಮೆರುಲಾರ್ ಸೋಸುವಿಕೆ : ರಕ್ತದ ಒತ್ತಡದಿಂದ ಗ್ಲಾಮರುಲಸ್‌ನಲ್ಲಿ ರಕ್ತವು ಸೋಸಲ್ಪಡುತ್ತದೆ. ಇದರಲ್ಲಿ ತ್ಯಾಜ್ಯ ಘಟಕಗಳ ಜೊತೆಗೆ ಗ್ಲುಕೋಸ್, ಅಮೈನೋ ಆಮ್ಲಗಳು ಹಾಗೂ ನೀರಿನಂತಹ ಉಪಯುಕ್ತ ಪದಾರ್ಥಗಳು ಇರುತ್ತವೆ.

ವ್ಯತ್ಯಸ್ಥ ಮರುಹೀರಿಕೆ : ಗ್ಲಾಮರುಲಸ್‌ನಲ್ಲಿ ಶೋಧಿಸಲ್ಪಟ್ಟ ದ್ರವದಲ್ಲಿರುವ ಉಪಯುಕ್ತ ಪದಾರ್ಥಗಳು ನುಲಿಕೆ ನಾಳದಲ್ಲಿ ಮರುಹೀರಲ್ಪಡುತ್ತವೆ.

ನಳಿಕಾ ಸ್ರವಿಕೆ : ನುಲಿಕೆ ನಾಳದಿಂದ ಸಂಗ್ರಾಹಕ ನಾಳ ಸೇರುವ ದ್ರವವು ಯೂರಿಯಾ, ಯೂರಿಕ್ ಆಮ್ಲಯುಕ್ತ ತ್ಯಾಜ್ಯಗಳ ಜೊತೆ ನೀರನ್ನು ಒಳಗೊಂಡಿದ್ದು ಮೂತ್ರ ಎನಿಸಿಕೊಳ್ಳುತ್ತದೆ. ಮೂತ್ರದ ಸಾರತೆಯನ್ನು ಕಡಿಮೆ ಮಾಡಲು ಸಂಗ್ರಾಕ ನಾಳವು ಮೂತ್ರಕ್ಕೆ ನೀರನ್ನು ಸೇರಿಸುತ್ತದೆ.

**10. ಸಸ್ಯಗಳಲ್ಲಿ, ವಸ್ತುಗಳ ಸಾಗಾಣಿಕೆಯಲ್ಲಿ ಕ್ಸೈಲಂ ಮತ್ತು ಫ್ಲೋಯಂ ಅಂಗಾಂಶಗಳ ಪಾತ್ರವನ್ನು ವಿವರಿಸಿ.**

ಉತ್ತರ : ಕ್ಸೈಲಂ: ಜಲವಾಹಕ ಅಂಗಾಂಶ

• ಬೇರುಗಳಿಂದ ಹೀರಲ್ಪಟ್ಟ ನೀರು ಮತ್ತು ಲವಣಾಂಶಗಳನ್ನು ಸಸ್ಯದ ಎಲ್ಲಾ ಭಾಗಗಳಿಗೆ ಸಾಗಿಸುತ್ತದೆ.

• ಬಾಷ್ಪವಿಸರ್ಜನೆ (ಪತ್ರರಂಧ್ರಗಳಿಂದ ನೀರು ನಷ್ಟವಾಗುವಿಕೆ)ಯು ಚೋಷಣವನ್ನು ಉಂಟುಮಾಡುತ್ತದೆ. ಇದು ನೀರು ಮತ್ತು ಅದರಲ್ಲಿ ಕರಗಿರುವ ಲವಣಗಳನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ.

ಫ್ಲೋಯಂ : ಆಹಾರವಾಹಕ ಅಂಗಾಂಶ

• ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು, ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಫ್ಲೋಯಂ ಅಂಗಾಂಶವು ಎಲೆಗಳಿಂದ ಬೇರುಗಳು, ಹಣ್ಣುಗಳು ಮತ್ತು ಬೀಜಗಳಂತಹ ಸಂಗ್ರಹಣಾ ಅಂಗಗಳಿಗೆ ಮತ್ತು ಬೆಳೆಯುತ್ತಿರುವ ಅಂಗಗಳಿಗೆ ಪೂರೈಸುತ್ತದೆ.

• ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಮತ್ತು ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ.

• ನೀರು ಫ್ಲೋಯಂ ಅಂಗಾಂಶದೊಂದಿಗೆ ಪ್ರವೇಶಿಸಲು ಹಾಗೂ ಇತರ ವಸ್ತುಗಳು ಫ್ಲೋಯಂನಿಂದ ಬೇರೆ ಅಂಗಾಂಶಗಳಿಗೆ ಪ್ರವೇಶಿಸಲು ಅಭಿಸರಣ ಒತ್ತಡವು ಸಹಾಯಮಾಡುತ್ತದೆ.

(.............................ಮುಂದುವರೆಯುತ್ತದೆ)

ಮಾರ್ಗದರ್ಶಿ ವಿಜ್ಞಾನ ಶಿಕ್ಷಕರು: ಶಿವತನಯ ಎಸ್.ಸಿ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಬೆಣಕಲ್ಲು ಹ.ಬೊ.ಹಳ್ಳಿ (ತಾ)



HAMPI TIMES
Print & Digital Daily News Paper
Contact fof Ads : M: 9448633038
Scan For Digital Colourful HAMPI TIMES E-paper